# ಕರ್ನಾಟಕ ಯಕ್ಷಗಾನ ಅಕಾಡೆಮಿ, ಬೆಂಗಳೂರು

www.karnatakayakshaganaacademy.com

ಪ್ರಾಯೋಜಕತ್ವದಲ್ಲಿ ಪ್ರಕಾಶಿತ

ಯಕ್ಷಗಾನ ಪ್ರಸಂಗ

# ಅಹಲ್ಯೋದ್ಧಾರ

ಕವಿ

## ಬೆಳಸಲಿಗೆ ಗಣಪತಿ ಹೆಗಡೆ

ಅಂತರಜಾಲ ಆವೃತ್ತಿ, ಸಹ-ಪ್ರಕಾಶಕರು ಮತ್ತು ಪ್ರಕಾಶನ ನಿರ್ವಾಹಕರು

ಯಕ್ಷವಾಹಿನಿ®

Email: yakshaprasangakosha@gmail.com

Blog: www.yakshaprasangakosha.yakshavahini.com

ಆವೃತ್ತಿ ೧.೦ ನವೆಂಬರ್ ೧೫, ೨೦೨೦

ಯಕ್ಷವಾಹಿನಿ®

Email: yakshaprasangakosha@gmail.com, yakshavahini@gmail.com, Blog: www.yakshaprasangakosha.yakshavahini.com

## ಯಕ್ಷವಾಹಿನಿಯ ಯಕ್ಷಪ್ರಸಂಗಕೋಶ ಯೋಜನಾ ಸಮೂಹ

**ಗೌರವಾನ್ವಿತ ಸಂಪಾದಕ ಮಂಡಳಿ:**

ಶ್ರೀಧರ ಡಿ. ಎಸ್. (ಗೌರವಾಧ್ಯಕ್ಷರು), ಗಿಂಡೀಮನೆ ಮೃತ್ಯುಂಜಯ, ಡಾ. ಆನಂದರಾಮ ಉಪಾಧ್ಯ, ದಿನೇಶ ಉಪ್ಪೂರ, ಅಶೋಕ ಮುಂಗಳಿಮನೆ

**ಗೌರವಾನ್ವಿತ ಸಲಹಾ ಮಂಡಳಿ:**

ಅನಂತ ಪದ್ಮನಾಭ ಫಾಟಕ್, ಡಾ. ಪ್ರದೀಪ ಸಾಮಗ, ವಿದುಷಿ ಸುಮಂಗಲಾ ರತ್ನಾಕರ್, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅವಿನಾಶ್ ಬೈಪಾಡಿತ್ತಾಯ, ಮಹೇಶ್ ಪದ್ಯಾಣ, ನಾರಾಯಣ ಹೆಬ್ಬಾರ್

**ಕಾರ್ಯಕಾರಿ ಮಂಡಳಿ:**

ರವಿ ಮಡೋಡಿ (ಯೋಜನಾಧ್ಯಕ್ಷ), ಅಶ್ವಿನಿ ಹೊದಲ (ಯೋಜನಾ ಕಾರ್ಯದರ್ಶಿ), ವಿಂಧ್ಯಾಶ್ರೀ ಸೋಮಯಾಜಿ (ಯೋಜನಾ ಸಹಕಾರ್ಯದರ್ಶಿ), ನಟರಾಜ ಉಪಾಧ್ಯ, ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ. ನಾ. ಭಟ್, ಅಜಿತ್ ಕಾರಂತ್, ಇಟಗಿ ಮಹಾಬಲೇಶ್ವರ ಭಟ್, ಪಟ್ಲಾಜೆ ವಸಂತಕೃಷ್ಣ, ಡಾ. ಶ್ರೀಕೃಷ್ಣ ಭಟ್ ಸುಣ್ಣಂಗುಳಿ, ವಿದ್ಯಾಹೆಗಡೆ ಕವಿತಾಸ್ಫೂರ್ತಿ, ಶಿವಕುಮಾರ ಬಿ. ಅಳಗೋಡು

**ಗೌರವಾನ್ವಿತ ಸ್ವಯಂಸೇವಕರು:**

ಗಣಪತಿ ಭಟ್ ಪಿ., ವಸುಮತಿ ಜಿ., ಅನಿತಾ ಎಂ. ಜಿ. ರಾವ್, ರಂಜನ ಭಟ್, ಶಶಿಕಲಾ ಮೂರ್ತಿ, ರಘುರಾಜ್ ಶರ್ಮ, ಚಂದ್ರ ಆಚಾರ್, ಸುಬ್ರಹ್ಮಣ್ಯ ಭಾಗವತ್, ಉಮೇಶ್ ಶಿರೂರು, ವೆಂಕಟೇಶ್ ಹೆಗಡೆ, ವೆಂಕಟೇಶ್ ವೈದ್ಯ, ಕೆ. ಗೋವಿಂದ ಭಟ್ ಬೆಂಗಳೂರು, ಸತೀಶ್ ಯಲ್ಲಾಪುರ, ಮಯೂರಿ ಉಪಾಧ್ಯಾಯ, ಶ್ರೀಕಾಂತ್ ನಾಯಕ್, ರವಿ ಕಾಮತ್ ಕುಮಟಾ, ರಾಮಕೃಷ್ಣ ಮರಾಠಿ

**ಸಹಕಾರ:**

**ಪ್ರಸಂಗ ಕವಿಗಳು:**

ಬಲಿಪ ನಾರಾಯಣ ಭಾಗವತ, ಹೊಸ್ತೋಟ ಮಂಜುನಾಥ ಭಾಗವತ, ಪ್ರೊ. ಎಂ. ಎ. ಹೆಗಡೆ, ಡಾ. ಅಮೃತ ಸೋಮೇಶ್ವರ, ಶ್ರೀಧರ ಡಿ. ಎಸ್., ಎಂ. ಆರ್. ಲಕ್ಷ್ಮೀನಾರಾಯಣ, ಮಧುಕುಮಾರ್ ಬೋಳೂರು, ಅಗರಿ ಭಾಸ್ಕರ ರಾವ್, ಅಂಬರೀಷ ಭಾರದ್ವಾಜ, ಶಿವಕುಮಾರ ಬಿ. ಅಳಗೋಡು, ದಿನೇಶ ಉಪ್ಪೂರ, ಗಿಂಡೀಮನೆ ಮೃತ್ಯುಂಜಯ, ಇಟಗಿ ಮಹಾಬಲೇಶ್ವರ ಭಟ್, ವಿಶ್ವವಿನೋದ ಬನಾರಿ, ಮಧೂರು ವೆಂಕಟಕೃಷ್ಣ, ಡಾ. ಪಟ್ಲಾಜೆ ಗಣೇಶ ಭಟ್

**ಕವಿಚರಿತ್ರೆ ಮತ್ತು ಪ್ರಸಂಗಯಾದಿ:**

ಡಾ. ಕಬ್ಬಿನಾಲೆ ವಸಂತ ಭಾರದ್ವಾಜ, ಡಾ. ಪಾದೇಕಲ್ಲು ವಿಷ್ಣು ಭಟ್

**ಸಂಸ್ಥೆಗಳು:**

ಕರ್ನಾಟಕ ಯಕ್ಷಗಾನ ಅಕಾಡೆಮಿ & ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ಕರ್ನಾಟಕ ಸರ್ಕಾರ), ಯಕ್ಷಗಾನ ಕಲಾರಂಗ ಉಡುಪಿ, ಯಕ್ಷಸಿಂಚನ ಬೆಂಗಳೂರು

**ಪ್ರಸಂಗ ಪುಸ್ತಕ ಒದಗಣೆ ಮತ್ತಿತರ:**

ಡಾ. ರಾಧಾಕೃಷ್ಣ ಉರಾಳ್, ಅಗರಿ ಭಾಸ್ಕರ ರಾವ್, ಗೋಪಾಲಕೃಷ್ಣ ಭಾಗವತ್, ಶ್ರೀಪಾದಗದ್ದೆ, ಮುರಳಿ ಶ್ರೇಣಿ, ಅನಂತ ದಂತಳಿಕೆ, ಗುರುನಂದನ್ ಹೊಸೂರು, ನಾರಾಯಣ ಶಾನುಭಾಗ, ನಾರಾಯಣ ಯಾಜಿ, ಶೇಷಗಿರಿಯಪ್ಪ, ಎಸ್. ಎಂ. ಹೆಗಡೆ, ದಿವಾಕರ ಹೆಗಡೆ, ನಿತ್ಯಾನಂದ ಹೆಗಡೆ ಮೂರೂರು, ಶ್ರೀನಿಧಿ ಡಿ. ಎಸ್., ರವೀಂದ್ರ ಐತುಮನೆ, ಗುರುರಾಜ ಹೊಳ್ಳ ಬಾಯಾರು, ಸುರೇಶ್ ಹೆಗಡೆ ಬೆಳಸಲಿಗೆ, ಮನೋಹರ ಕುಂದರ್, ನಂದಳಿಕೆ ಬಾಲಚಂದ್ರ ರಾವ್, ರಘುರಾಮ್ ಮುಳಿಯ, ಸುಧಾ ಕಿರಣ್ ಅಧಿಕ ಶ್ರೇಣಿ, ಮಹಾಬಲಮೂರ್ತಿ ಕೊಡ್ಲೆಕೆರೆ, ಎ. ಎನ್. ಹೆಗಡೆ, ಮುರಳೀಧರ ಉಪಾಧ್ಯ

## ಯಕ್ಷವಾಹಿನಿ ಸಂಸ್ಥೆ

**ಗೌರವಾನ್ವಿತ ಸಲಹಾ ಮಂಡಳಿ:**

ಮಲ್ಪೆ ಲಕ್ಷ್ಮೀನಾರಾಯಣ ಸಾಮಗ (ಗೌರವಾಧ್ಯಕ್ಷರು), ಶ್ರೀಧರ ಡಿ. ಎಸ್., ಗಿಂಡೀಮನೆ ಮೃತ್ಯುಂಜಯ, ದಿನೇಶ ಉಪ್ಪೂರ, ಡಾ. ಪ್ರದೀಪ ಸಾಮಗ, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅನಂತ ಪದ್ಮನಾಭ ಫಾಟಕ್, ವಿದುಷಿ ಸುಮಂಗಲಾ ರತ್ನಾಕರ್, ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ. ನಾ. ಭಟ್, ರಾಘವೇಂದ್ರ ಮಯ್ಯ (ಲೆಕ್ಕ ಪರಿಶೋಧಕರು)

**ವಿಶ್ವಸ್ಥ ಮಂಡಳಿ ಮತ್ತು ಕಾರ್ಯಕಾರಿ ಮಂಡಳಿ:**

ಡಾ. ಆನಂದರಾಮ ಉಪಾಧ್ಯ (ಅಧ್ಯಕ್ಷ), ನಟರಾಜ ಉಪಾಧ್ಯ (ಕಾರ್ಯದರ್ಶಿ), ರವಿ ಮಡೋಡಿ (ಖಜಾಂಚಿ)

**ಆರ್ಥಿಕ ಸಹಾಯ:**

ಅಶೋಕ್ ಶೆಟ್ಟಿ ವಿ. ಕೊಡ್ಲಾಡಿ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ

**ಪುಸ್ತಕ ಸಹಾಯ:**

ವಿದುಷಿ ಸುಮಂಗಲಾ ರತ್ನಾಕರ್, ಮಂಟಪ ಪ್ರಭಾಕರ ಉಪಾಧ್ಯ, ಡಾ. ಆನಂದರಾಮ ಉಪಾಧ್ಯ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ

# ಮೊದಲ ಮಾತು

ಯಕ್ಷಗಾನ ಪ್ರದರ್ಶನಗಳಿಗೆ ಆಧಾರವಾಗಿರುವುದು ಪ್ರಸಂಗಸಾಹಿತ್ಯ. ಅದು ಯಕ್ಷಗಾನದ ಏಕಮಾತ್ರ ಲಿಖಿತಸಾಹಿತ್ಯವೂ ಹೌದು. ಅದರ ಅಭಾವದಲ್ಲಿ ಯಕ್ಷಗಾನದ ಅಡಿಪಾಯವೇ ಇಲ್ಲವಾಗುತ್ತದೆ. ಈಗ ಅಂದಾಜಿಸಿದಂತೆ ಇಂಥ ಪ್ರಸಂಗಕೃತಿಗಳ ಸಂಖ್ಯೆ ಐದು ಸಾವಿರಕ್ಕೂ ಮಿಕ್ಕಿದೆ. ವರ್ಷವರ್ಷವೂ ನೂರಾರು ಹೊಸಕೃತಿಗಳ ಸೇರ್ಪಡೆಯಾಗುತ್ತಲೇ ಇವೆ. ಆದರೆ ವಿಷಾದದ ಸಂಗತಿಯೆಂದರೆ ಸೂಕ್ತವಾದ ವಿತರಣಾ ವ್ಯವಸ್ಥೆಯಿಲ್ಲ. ಬೇಕೆಂಬುವರಿಗೆ ಪ್ರಸಂಗಗಳು ಲಭಿಸುತ್ತಿಲ್ಲ. ಅನೇಕ ಪ್ರಾಚೀನ ಅರ್ವಾಚೀನ ಕೃತಿಗಳಿಗೆ ಮುದ್ರಣ ಭಾಗ್ಯವಿಲ್ಲ. ಮುದ್ರಿತವಾದ ಕೃತಿಗಳ ಮಾರಾಟ ಮತ್ತಷ್ಟು ತೊಡಕಿನದು. ಹೀಗಾಗಿ ಈಗಾಗಲೇ ಅನೇಕ ಕೃತಿಗಳು ನಾಶವಾಗಿವೆ; ಮತ್ತಿಷ್ಟು ನಾಶವಾಗುತ್ತಿವೆ.

ಯಕ್ಷಗಾನ ಪ್ರಸಂಗಗಳು ಕನ್ನಡಸಾಹಿತ್ಯದ ಶ್ರೀಮಂತಿಕೆಯ ದ್ಯೋತಕಗಳು. ಕನ್ನಡದಲ್ಲಿ ಬೆಳೆದು ಬಂದ ಛಂದೋ ವೈವಿಧ್ಯದ ಸಾರವನ್ನೆಲ್ಲ ಹೀರಿಕೊಂಡು ಸುಪುಷ್ಟವಾಗಿ ಬೆಳೆದು ನಿಂತ ಈ ಸಾಹಿತ್ಯ ಪ್ರಕಾರವು ಕನ್ನಡಕ್ಕೊಂದು ಹೆಮ್ಮೆ. ಅದರ ಸಿದ್ಧಿ ಸಾಧನೆಗಳನ್ನು ಕುರಿತು ಗಂಭೀರವಾದ ಅಧ್ಯಯನದ ಆವಶ್ಯಕತೆಯಿದೆ. ಆದರೆ ಪ್ರಸಂಗಳ ಅಲಭ್ಯತೆ ಅಧ್ಯಯನಕ್ಕೆ ತೊಡಕಾಗಿದೆ. ಅಧ್ಯಯನಕ್ಕೆ ತೊಡಗುವವರಿಗೆ ಕೃತಿಗಳನ್ನು ಸಂಗ್ರಹಿಸುವುದೊಂದು ದೊಡ್ಡ ಸವಾಲಾಗಿದೆ. ಇದರಿಂದ ಯಕ್ಷಗಾನಕ್ಕೆ ತನ್ಮೂಲಕ ಕನ್ನಡ ಸಾಹಿತ್ಯಕ್ಕೆ  ಹಾನಿಯಾಗುತ್ತಿದೆ.

ಇದನ್ನು ಮನಗಂಡ ಯಕ್ಷಗಾನ ಅಕಾಡೆಮಿಯು ಮಹತ್ವಾಕಾಂಕ್ಷೆಯ ಯೋಜನೆಯೊಂದನ್ನು ಕೈಗೊಂಡಿದೆ. ಅದೇ ಯಕ್ಷಗಾನ ಪ್ರಸಂಗಗಳ ಡಿಜಿಟಲೀಕರಣ. ಎಲ್ಲ ಪ್ರಸಂಗಗಳನ್ನು ಡಿಜಿಟಲೀಕರಣಕ್ಕೊಳಪಡಿಸಿ ಅಕಾಡೆಮಿಯ ವೆಬ್ಸೈಟಿನ ಮೂಲಕ ಆಸಕ್ತರಿಗೆ ಉಚಿತವಾಗಿ ತಲುಪಿಸುವ ವ್ಯವಸ್ಥೆ ಇದು. ಪ್ರಪಂಚದ ಯಾವುದೇ ಮೂಲೆಯಲ್ಲಿದ್ದರೂ ಬೇಕಾದ ಕೃತಿಯನ್ನು ಪಡೆದುಕೊಳ್ಳಲು ಯಕ್ಷಗಾನ ಪ್ರಸಂಗವನ್ನು ತೆಗೆದುಕೊಂಡು ಯಕ್ಷಗಾನ ಮಾಡುವವರಿಗೆ ಅತ್ಯಂತ ಅನುಕೂಲ. ಅಧ್ಯಯನಕ್ಕೂ, ಸಂಗ್ರಹಕ್ಕೂ ಅನುಕೂಲ ಹಾಗೂ  ಯಕ್ಷಗಾನ ಪ್ರಿಯರಿಗೆ ಆಪ್ತವಾದೀತೆಂದು ಭಾವಿಸಿದ್ದೇವೆ.

ಇದನ್ನು ಕಾರ್ಯಗತಗೊಳಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನೆರವು ದೊಡ್ಡದು. ಈ ಕಾರ್ಯಕ್ಕೆ ಯಕ್ಷವಾಹಿನಿ ಸಂಸ್ಥೆಯು ಕೈಜೋಡಿಸಿರುವುದು ಹಾಗೂ ಪುಸ್ತಕರೂಪದಲ್ಲಿ ಯಕ್ಷಗಾನ ಪ್ರಸಂಗವನ್ನು ಸಿದ್ಧಗೊಳಿಸಿಕೊಡುತ್ತಿದೆ. ಇದಕ್ಕೆ ಅಕಾಡೆಮಿಯ ಸರ್ವಸದಸ್ಯರ ಸಹಮತವಿದೆ. ಈ ಯೋಜನೆಯನ್ನು ಕೃತಿರೂಪಕ್ಕೆ ತರಲು ಸಹಕರಿಸಿದವರೆಲ್ಲರನ್ನೂ, ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರನ್ನೂ, ಸರ್ಕಾರವನ್ನೂ ಹೃತ್ಪೂರ್ವಕವಾಗಿ ನೆನೆಯುತ್ತೇವೆ.



ಪ್ರೊ. ಎಂ. ಎ. ಹೆಗಡೆ
ಅಧ್ಯಕ್ಷರು
ಕರ್ನಾಟಕ ಯಕ್ಷಗಾನ ಅಕಾಡೆಮಿ



ಎಸ್. ಎಚ್. ಶಿವರುದ್ರಪ್ಪ
ರಿಜಿಸ್ಟ್ರಾರ್
ಕರ್ನಾಟಕ ಯಕ್ಷಗಾನ ಅಕಾಡೆಮಿ

## ಯಕ್ಷಪ್ರಸಂಗಕೋಶ ಯೋಜನೆ

ಕನ್ನಡ ಕಾವ್ಯದ ಚರಿತ್ರೆಯಲ್ಲಿ ಬಹುದೊಡ್ಡ ಸ್ಥಾನ ಪಡೆಯಬೇಕಾದ ಕೃತಿಗಳು ಅವಜ್ಞೆಗೊಳಗಾದುದನ್ನು ಗಮನಿಸಿ ಯಕ್ಷವಾಹಿನಿ ಸಂಸ್ಥೆಯಿಂದ ಯಕ್ಷಪ್ರಸಂಗಕೋಶದ ನಿರ್ಮಾಣವಾಗುತ್ತಿದೆ. ಯಕ್ಷಗಾನ ಪ್ರಸಂಗಗಳು ಪ್ರಯೋಗದ ಆಧಾರ ಪಠ್ಯಗಳು. ವ್ಯಾಖ್ಯಾನದ ಅಗತ್ಯವೂ ಇರುವುದರಿಂದ ಪ್ರಸಂಗಕವಿಗಳು ಬರೆದ ಗೀತೆಗಳು ಗುಣಮಟ್ಟದಲ್ಲೂ ಮೇಲಾಗಿದ್ದು ವಿದ್ವಾಂಸರಿಂದ ಮರಳಿ ಮರಳಿ ವ್ಯಾಖ್ಯಾನಕ್ಕೆ ಒಳಗಾಗಿವೆ. ಇಂತಹ ಪಠ್ಯಗಳನ್ನು ಖಿಲವಾಗದಂತೆ ಶಾಶ್ವತವಾಗಿ ಕಾಪಿಡುವುದೂ, ಜಾಗತಿಕ ಮಟ್ಟದಲ್ಲಿ ಲಭ್ಯವಾಗುವಂತೆ ಮಾಡುವುದೂ ನಮ್ಮ ಯಕ್ಷಪ್ರಸಂಗಕೋಶದ ಉದ್ದೇಶ. ಅದಕ್ಕೆ ಇಂದು ಅಂತರಜಾಲವೇ ಸೂಕ್ತ ಮಾಧ್ಯಮವಾಗಿದೆ. ಅಂತರಜಾಲದ ಮೂಲಕ ಪ್ರಕಟವಾದ ಪ್ರಸಂಗವೂ, ಅದನ್ನು ಸಿದ್ಧಪಡಿಸಿದ ಸಂಸ್ಥೆಯೂ ಇಡೀ ವಿಶ್ವದ ಮುಂದೆ ನಿಂತಿರುತ್ತದೆ ಎಂಬ ಅರಿವನ್ನುಇಟ್ಟುಕೊಂಡೇ ಪ್ರಸಂಗಗಳನ್ನು ಸಿದ್ಧಪಡಿಸಿದ್ದೇವೆ.

ಪ್ರಸಂಗಗಳ ಪ್ರಸ್ತುತ ರೂಪದಲ್ಲಿ ಇರುವ ಮುದ್ರಣ ದೋಷಗಳು, ವ್ಯಾಕರಣ ದೋಷಗಳು, ಗ್ರಾಮ್ಯಶಬ್ದಗಳ ಬಳಕೆಯಿಂದಾದ ಶೈಥಿಲ್ಯ, ಶಬ್ದಗಳನ್ನು ಬಿಡಿಸಬೇಕಾಗಿದ್ದಲ್ಲಿ ಕೂಡಿಸಿ, ಕೂಡಿಸಬೇಕಾಗಿದ್ದಲ್ಲಿ ಬಿಡಿಸಿ ಉಂಟಾದ ದೋಷಗಳು, ಮಟ್ಟುಗಳ ಹೆಸರುಗಳಲ್ಲಿ ಕಣ್ತಪ್ಪಿನಿಂದ ನುಸುಳಿದ ದೋಷಗಳು, ಆಟ ಆಡಿಸುವಾಗ ಅನುಕೂಲಕ್ಕೆ ತಕ್ಕಂತೆ ಭಾಗವತರು ಸೇರಿಸಿಕೊಂಡ ಅನ್ಯ ಪ್ರಸಂಗಗಳ ಪದಗಳು ಮುದ್ರಿತರೂಪದಲ್ಲಿ ಸೇರಿಹೋಗಿರುವುದು, ಮುದ್ರಣವಾಗುವಾಗ ಕೆಲವು ಪದಗಳು ಬಿಟ್ಟುಹೋಗಿರುವುದು ಇವುಗಳೆಲ್ಲ ಕವಿಯು ಶ್ರಮವಹಿಸಿ ರಚಿಸಿದ ಸುಂದರ ರಚನೆಯಲ್ಲಿ ಅರ್ಥಾಂತರವನ್ನೋ, ಅಪಾರ್ಥವನ್ನೋ ಉಂಟುಮಾಡುವ ಸಾಧ್ಯತೆಯಿದೆ. ಈಗ ಪ್ರಕಟಿಸುತ್ತಿರುವ ಪ್ರಸಂಗಗಳನ್ನು ಸಾಧ್ಯವಾದ ಮಟ್ಟಿಗೆ ಈ ದೋಷಗಳಿಂದ ಮುಕ್ತಗೊಳಿಸಿದ್ದೇವೆ ಎಂಬ ಭರವಸೆ ನಮಗಿದೆ. ಒಟ್ಟಿನಲ್ಲಿ ನಮ್ಮ 'ಪ್ರಸಂಗಕೋಶ'ದಿಂದ ಪಡೆದುಕೊಂಡ ಪ್ರಸಂಗವು ಶುದ್ಧವಾಗಿರಬೇಕೆಂಬುದೇ ನಮ್ಮ ಅಪೇಕ್ಷೆ.



**ಶ್ರೀಧರ ಡಿ. ಎಸ್.**
ಪ್ರಧಾನ ಸಂಪಾದಕರು



**ಗಿಂಡೀಮನೆ ಮೃತ್ಯುಂಜಯ**
ಸಹ ಸಂಪಾದಕರು



**ರವಿ ಮಡೋಡಿ**
ಯೋಜನಾಧ್ಯಕ್ಷರು

## ಯಕ್ಷವಾಹಿನಿ

ಯಕ್ಷಗಾನವು ಕನ್ನಡ ಸಂಸ್ಕೃತಿಯ ಕಿರೀಟದಲ್ಲಿ ರಾರಾಜಿಸುತ್ತಿರುವ ದೊಡ್ಡ ನವಿಲುಗರಿಯು. ಅಖಂಡ ಕರ್ನಾಟಕದ ಯಕ್ಷಗಾನ ಪರಂಪರೆಯ ಹಿರಿಮೆ ಗರಿಮೆಗಳನ್ನು ಹೆಚ್ಚಿಸುವತ್ತ ಅಂತರಜಾಲದ ಸಾಧ್ಯತೆಗಳನ್ನು ಸದುಪಯೋಗಪಡಿಸಿಕೊಳ್ಳುವುದೇ ಯಕ್ಷವಾಹಿನಿ ಸಂಸ್ಥೆಯ ಮುಖ್ಯ ಕಾಣ್ಕೆಯಾಗಿದೆ. ಯಕ್ಷಪ್ರಸಂಗಯಾದಿ ಮತ್ತು ಯಕ್ಷಪ್ರಸಂಗಕೋಶ ಇವೆರೆಡು ನಾವು ಈಗಾಗಲೇ ತೊಡಗಿಸಿಕೊಂಡಿರುವ ಪ್ರಾಥಮಿಕ ಯೋಜನೆಗಳು. ಈ ಯೋಜನೆಗಳಿಗೆ ಬೆನ್ನೆಲುಬಾಗಿ ನಮ್ಮೊಂದಿಗಿರುವ ಎಲ್ಲಾ ವಿದ್ವಾಂಸರು, ಪ್ರಸಂಗಕವಿಗಳು, ಸ್ವಯಂಸೇವಕರು, ಪ್ರಾಯೋಜಕರು ಹಾಗೂ ಎಲ್ಲಾ ರೀತಿಯ ಬೆಂಬಲ ಮತ್ತು ಸಹಾಯ ನೀಡುತ್ತಿರುವ ವಿಶ್ವವ್ಯಾಪಿ ಯಕ್ಷಪ್ರೇಮಿಗಳಿಗೆ ವಿನಮ್ರ ಧನ್ಯವಾದಗಳು. ಪ್ರಾಯೋಜಕತ್ವ ಹೆಚ್ಚಿದಂತೆ ನಮ್ಮ ಇನ್ನೂ ಅನೇಕ ಕನಸುಗಳು ಯೋಜನೆಗಳಾಗಿ ಅನಾವರಣಗೊಳ್ಳಲಿವೆ. ನಿಮ್ಮ ಹೆಚ್ಚುತ್ತಿರುವ ಸಹಕಾರ, ಸಹಾಯ, ಬೆಂಬಲ ಮತ್ತು ಆಶೀರ್ವಾದಕ್ಕೆ ನಾವು ಚಿರಋಣಿಗಳು.

**ಪ್ರೊ. ಮಲ್ಪೆ ಲಕ್ಷ್ಮೀನಾರಾಯಣ ಸಾಮಗ, ಗೌರವಾಧ್ಯಕ್ಷರು**

**ಡಾ. ಆನಂದರಾಮ ಉಪಾಧ್ಯ, ಕಾರ್ಯಾಧ್ಯಕ್ಷ ಮತ್ತು ವಿಶ್ವಸ್ಥ**

**ನಟರಾಜ ಉಪಾಧ್ಯ, ಕಾರ್ಯದರ್ಶಿ ಮತ್ತು ವಿಶ್ವಸ್ಥ**

**ರವಿ ಮಡೋಡಿ, ಖಜಾಂಚಿ ಮತ್ತು ವಿಶ್ವಸ್ಥ**

# ಸಾರಾಂಶ

**ಪ್ರಸಂಗ ವಿಧ:**

ಪೌರಾಣಿಕ

**ಆಧಾರ ಗ್ರಂಥ:**

ರಾಮಾಯಣ

**ಭಾಷೆ:**

ಕನ್ನಡ

**ಹಿಂದಿನ ಪ್ರಕಾಶನಗಳ ವಿವರ:**

೧. ಬೆಳಸಲಿಗೆ ಗಣಪತಿ ಹೆಗಡೆ ಕೃತಿ ಪ್ರಕಾಶನ, ಸಿದ್ದಾಪುರ, ಬೆಳಸಲಿಗೆ ಕೃತಿ ಸಂಪುಟ ೪ - ೨೦೦೦

**ಹಕ್ಕುಸ್ವಾಮ್ಯ ವಿವರ:**

ಈ ಅಂತರಜಾಲ ಆವೃತ್ತಿಯು ವಿಶ್ವದಾದ್ಯಂತ ಉಚಿತವಾಗಿ ಹಂಚಲ್ಪಡುವುದೇ ಜಂಟಿ ಪ್ರಕಾಶಕರ ಘನ ಉದ್ದೇಶವು. ಈ ಆವೃತ್ತಿಯನ್ನು ಹೇಗಿದೆಯೋ ಹಾಗೆಯೇ ಸಮಗ್ರವಾಗಿ ಮುದ್ರಿಸಲು ಯಾ ಅಂತರಜಾಲದ ಮೂಲಕ ಉಚಿತವಾಗಿ ಹಂಚಲು ಯಾವುದೇ ಅಭ್ಯಂತರ ಇಲ್ಲ. ಮೂಲ ಪ್ರಕಾಶನಗಳ ಹಕ್ಕುಸ್ವಾಮ್ಯ ಹೇಗಿದೆಯೋ ಹಾಗೆಯೇ ಉಳಿದಿರುತ್ತದೆ.

**ಒಟ್ಟು ಪದ್ಯಗಳು:**

೨೦೫

**ಪಾತ್ರಗಳು:**

ದೇವೇಂದ್ರ, ಬೃಹಸ್ಪತಿ, ನಾರದ, ಸರಸ್ವತಿ, ಗೌತಮ, ತಾಟಕಿ, ಸುಬಾಹು, ಶ್ರೀರಾಮ, ವಸಿಷ್ಠ, ಸುಮಂತ್ರ, ಶಚೀದೇವಿ, ಚಿತ್ರಸೇನ, ಬ್ರಹ್ಮ, ಅಹಲ್ಯಾ, ಅಗಸ್ತ್ಯ, ಮಾರೀಚ, ದಶರಥ, ಲಕ್ಷ್ಮಣ, ವಿಶ್ವಾಮಿತ್ರ, ಚಾರಕರು, ಬ್ರಾಹ್ಮಣರು, ಅಪ್ಸರೆಯರು

**ಕಥಾ ಸಾರಾಂಶ:**

ದೇವಲೋಕದಲ್ಲಿ ದೇವೇಂದ್ರನ ಒಡ್ಡೋಲಗ. ಅಲ್ಲಿಗೆ ಬಂದ ನಾರದರಿಂದ ಬ್ರಹ್ಮನ ಮಗಳಾದ ಅಹಲ್ಯೆಯ ರೂಪವರ್ಣನೆ. ಇದರಿಂದ ಮೋಹಗೊಂಡ ದೇವೇಂದ್ರ, ಆಕೆಯನ್ನು ವರಿಸಲು ಸತ್ಯಲೋಕಕ್ಕೆ ಹೋಗುತ್ತಾನೆ. ಅದೇ ವೇಳೆಗೆ ಬ್ರಹ್ಮಲೋಕಕ್ಕೆ ಗೌತಮಮಹರ್ಷಿಯೂ ಬಂದಿದ್ದು ಅವನೂ ವಿವಾಹೇಚ್ಛುವಾಗಿರುತ್ತಾನೆ. ಆಗ ಬ್ರಹ್ಮನು ಯಾರು ಮೊದಲು ಲೋಕಪ್ರದಕ್ಷಿಣೆ ಬರುವರೋ ಅವರಿಗೆ ಮಗಳನ್ನು ಕೊಡುವೆನೆಂದಾಗ, ಇಂದ್ರ ಐರಾವತವನ್ನೇರಿ ಹೊರಡುತ್ತಾನೆ. ಮತಿವಂತನಾದ ಗೌತಮ, ಬ್ರಹ್ಮದೇವನಿಗೇ ಪ್ರದಕ್ಷಿಣೆ ಬಂದು ತಾನು ಜಯಶಾಲಿಯೆನ್ನಲು ಬ್ರಹ್ಮನು ಅಹಲ್ಯೆಯನ್ನು ಆತನಿಗೇ ಕೊಡುತ್ತಾನೆ.

ಗೌತಮಾಶ್ರಮದಲ್ಲಿದ್ದ ಅಹಲ್ಯೆಯನ್ನು ದೇವೇಂದ್ರ ಮೋಸದಿಂದ ಕೂಡುತ್ತಾನೆ. ವಿಷಯ ತಿಳಿದ ಮಹರ್ಷಿ, ಇಂದ್ರನಿಗೆ ಸಹಸ್ರಯೋನಿಯಾಗುವಂತೆಯೂ, ಅಹಲ್ಯೆ ಕಲ್ಲಾಗಿ ಬಿದ್ದಿರುವಂತೆಯೂ ಶಪಿಸಿ ತಾನು ತಪಸ್ಸಿಗೆ ತೆರಳುವನು. ಮುಂದೆ ಶ್ರೀರಾಮನು ವಿಶ್ವಾಮಿತ್ರರ ಯಜ್ಞಸಂರಕ್ಷಣೆಗಾಗಿ ಲಕ್ಷ್ಮಣನ ಸಹಿತ ಬಂದು ತನ್ನ ಪಾದಸ್ಪರ್ಶಮಾತ್ರದಿಂದ ಶಿಲೆಯಾದ ಅಹಲ್ಯೆಯನ್ನು ಉದ್ಧರಿಸುವ ಕಥಾನಕ.

**ಕವಿ ಪರಿಚಯ: (ಆಧಾರ: ಗಿಂಡೀಮನೆ ಮೃತ್ಯುಂಜಯ ಮತ್ತು ಕರ್ನಾಟಕ ಯಕ್ಷಗಾನ ಚರಿತ್ರೆ - ಡಾ. ಕಬ್ಬಿನಾಲೆ ವಸಂತ ಭಾರದ್ವಾಜ)**

ಬೆಳಸಲಿಗೆ ಗಣಪತಿ ಹೆಗಡೆಯವರು (೧೯೨೧-೧೯೯೭) ಉತ್ತರ ಕನ್ನಡದ ಸಿದ್ದಾಪುರ ತಾಲೂಕಿನ ಬೆಳಸಲಿಗೆಯವರು. ತಂದೆ ವಿಠ್ಠಪ್ಪ ಹೆಗಡೆ, ತಾಯಿ ಲಕ್ಷ್ಮಮ್ಮ, ಪತ್ನಿ ಕಲಾವತಿ. ಕೃಷಿಕ, ಯಕ್ಷಗಾನ ಕಲಾವಿದ. ಬಾಲ್ಯದಲ್ಲಿ ದೊರಕಿದ ಅಲ್ಪಸ್ವಲ್ಪ ಓದುಬರಹವೇ ಇವರ ವಿದ್ಯಾಭ್ಯಾಸ. ಆದರೆ ಇವರ ಕಾವ್ಯರಚನಾ ಪ್ರೌಢಿಮೆಯು ಪಂಡಿತರೂ ತಲೆದೂಗುವಂತಿದೆ. ಸಮಗ್ರ ಮಹಾಭಾರತ (ಅರ್ಥಾತ್ ಕುರುಕ್ಷೇತ್ರ) ವು ಇವರ ಮೊದಲ ಕೃತಿ. ಕಾರಣಾಂತರಗಳಿಂದ ಯಕ್ಷಗಾನದ ಕವಿಗಳ ಸಾಲಿನಲ್ಲಿ ಇವರಿಗೆ ಸಿಗಬೇಕಾಗಿದ್ದ ಸ್ಥಾನ ಸಿಕ್ಕಿಲ್ಲವೆಂದು ಕಾಣುತ್ತದೆ.

ಇವರು ಬರೆದ ಪ್ರಸಂಗಗಳು: ಸಮಗ್ರಭಾರತ, ಸಂಪೂರ್ಣ ರಾಮಾಯಣ, ಕೌಂತೇಯ ಕರ್ಣ, ಆಂಜನೇಯ ಪರಾಜಯ, ವಸಂತಸೇನಾ, ಕಲಿಗರ್ವಭಂಗ, ಶ್ರೀಮತೀಪರಿಗ್ರಹ, ಪಾರ್ವತೀ ಆಗ್ರಹ, ಪುತ್ರಬಲಿದಾನ, ತ್ರಿಭುವನ ವಿಜಯ, ಸತೀಸಾಮರ್ಥ್ಯ, ಅಹಲ್ಯೋದ್ಧಾರ, ಇಟಗಿ ಕ್ಷೇತ್ರಮಹಾತ್ಮೆ, ಮಾಯಾ ಮಂದಾರವತಿ, ಗಂಗಾವತರಣ, ಚ್ಯವನ – ಸುಕನ್ಯಾ, ಓಘವತೀ ಪರಿಣಯ, ವಿಕ್ರಮಾದಿತ್ಯ ವಿಜಯ, ಸೀತಾರಾಮ ಪರಂಧಾಮ, ದುಷ್ಯಂತ ಶಾಕುಂತಲಾ, ಮಹಾಸತಿ ಮಂಡೋದರಿ, ಭಾನುತೇಜಸ್ವಿ, ಕನ್ನಡ ಕೇಸರಿ, ಕನ್ಯಾರತ್ನ, ಸೌಭಾಗ್ಯಪ್ರದಾನ

**ಟಿಪ್ಪಣಿ:**

# ಪ್ರಸಂಗ ಸಾಹಿತ್ಯ

**ಕಂದಪದ್ಯ (ನಿವೇದನಂ)**
ಪ್ರೇಮದ ತನುಜಗೆ ಮಿಗಿಲಹ |
ಹೇಮಾ್ಗರ್ಮಂಜಾ್ಥಾಹ್ವಯ ಕಾಮಿತದಂತಾಂ ||
ನೇಮದಿ ಬರೆದೀ ಕೃತಿ ದು |
ಷ್ಕಾಮವ ತೊಡೆದರೆ ಸಾರ್ಥಕವೀ ಮಹಿಗೆಂಬೆಂ || 1|| 1 ||

**ಭಾಮಿನಿ**
ಗುರು ಗಣಪ ಸಿರಿ ಹರಿಯುಮಾ ಮೃಡ |
ಸರಸ್ವತಿಯ ವಿಧಿ ಶಚಿ ಸುರೇಂದ್ರಾ |
ದ್ಯರಿಗೆರಗಿ ಮುನಿ ನಿಕರ ಪಿತೃ ಕವಿವರರ ಬಲವಂದು ||
ಧರಣಿಸುರನಾನೆಕ್ಷಗಾನದಿ |
ಬರೆವೆ ಗಣಪತಿ ವಿಠಲಸಂಭವ |
ಇರವು ಉ.ಕ. ಜಿಲ್ಲೆ ಸಿದ್ದಾಪುರದ ಬೆಳಸಲಿಗೆ ||1|| 2 ||

**ಸೌರಾಷ್ಟ್ರ - ತ್ರಿವುಡೆ**
ಮೃಡನುಮೆಗೆ ಶ್ರೀರಾಮ ಚರಿತವ |
ನುಡಿವುತಿರೆ ತಡೆದೆಂದಳಾಸತಿ |
ಮಡದಿ ಮೌಕ್ತಿಕಮಣಿಯಹಲ್ಯೆಯ | ದಡಿಗ ಸುರಪ ||1||

ಕೆಡಿಸಿ ಶಾಪವನಾಂತ ಪೌಲಮಿ |
ನುಡಿಗನುಗ್ರಹಗೈದ ಗೌತಮ |
ಮಡದಿ ತಾ ಶಿಲೆಯಾಗಿ ಮುನ್ನಿನ | ಒಡಲನೆಂತು ||2||

ಪಡೆದಳೈ ಶ್ರೀರಾಮನಿಂದಲಿ |
ಮಡಿದ ತಾಟಕಿ ಯಾರು ತತ್ಪುತ |
ರೊಡಲಿರವ ಬಿತ್ತರಿಪುದೆನೆ ಹರ | ನುಡಿದ ಶಿವೆಗೆ ||3|| 5 ||

**ಭಾಮಿನಿ**
ಲೋಲೆ ಕೇಳ್ಸುರಪುರದೊಳೊಂದಿನ |
ಓಲಗದೊಳೆಸೆದಿರ್ದನಿಂದ್ರನು |
ಓಲಯಿಸುತಿರಲಖಿಲ ಸುಮನಸಜಾಲ ವಿಭವದಲಿ ||
ಶ್ರೀಲಲಾಮನ ನುತಿಸಿ ನಾರದ |
ನಾಲಯಕ್ಕೈತಂದ ತ್ರಿಜಗ |
ತ್ಪಾಲನೆದ್ದಾದರಿಸಿ ಕೂಡ್ರಿಸಿ ಕಾಲಿಗೆರಗುತಲಿ ||1|| 6 ||

**ಕಾಂಬೋಧಿ - ಝಂಪೆ**
ನೀವಿಳೆಯ ಹಿತಕಾಗಿ | ಮೈವಲವ ಧಿಕ್ಕರಿಸಿ |
ಗೈವುತಿಹಿರನಿಶವೂ ಪ್ರವಾಸ ||
ಆವಲ್ಲು ಬರಿದೆ ದಯ | ಗೈವರಲ್ಲವು ಬರಿದೆ |
ಯಾವುದಿಂದಿನ ವಿಶೇಷ ||1||

ಎಂದಡೆಂದನು ಮುನಿಪ | ತಂದೆ ಮಾನಸಸೃಷ್ಟಿ |
ಯಿಂದ ಜನಿಸಿಹಳೋರ್ವೆ ತಂಗಿ ||
ಸುಂದರಿಗೆ ಜೋಡಿಲ್ಲ | ಹೊಂದಿಹಳು ಯೌವನವ |
ಮುಂದಾರ ವರಿಪಳೊ ಶುಭಾಂಗಿ ||2||

ಸಿರಿ ಗೌರಿ ಸರಸತಿಯು | ಅರಸಿ ಶಚಿ ಮೇಣ್ ರತಿಯು |
ಸರಿಯಿಲ್ಲವೀಯಯ್ವರಿಂಗೆ ||
ತರುಣಿಮಣಿ ಪೌಲೋಮಿ | ಗೊರೆಯ ಹಳೆ ಪೆಸರೇನು |
ಒರೆಯೆಂದನಿಂದ್ರ ಮುನಿಪಂಗೆ ||3|| 9 ||

**ಆರ್ಯಸವಾಯ್ - ಏಕ**
ನಾರದನರಿಯದ | ರ್ಯಾರೀ ಅಯ್ವರ |
ನಾರಿಯಹಲ್ಯೆಯು | ಮೀರಿಹಳು ||
ಸಾರಸಭವ ಶೃಂ | ಗಾರ ರಸದಲಿ ಕು |
ಮಾರಿಯ ಸೃಜಿಸಿಹ | ಭಾರಿಯೊಳು ||1||

ಮೂವಿಳೆಗುತ್ತಮ | ವಾವುದೆಯಿರ್ದರು |
ನಾವೇ ಬಾಧ್ಯರು | ತೀವಿಯಲಿ ||
ಆ ವಿಧದಲಿ ಮುನಿ | ದೇವರು ಯೆನ್ನುಯ |
ಭಾವರೆಯಪ್ಪಿರಿ | ವಾವೆಯಲಿ ||2||

ಭಾವಜನಯ್ಯನ | ಭಾವವದೇನೆಂ |
ದಾವನರಿವ ತ್ರೈ | ಲೋಕದೊಳು ||
ಭಾವನೆನಿಪ ದು | ರ್ಭಾವದಿ ದುಡುಕಲ |
ಭಾವ ಪದವಿಗವಿ | ವೇಕದೊಳು ||3|| 12 ||

**ಸೌರಾಷ್ಟ್ರ - ತ್ರಿವುಡೆ**
ಸರಿದ ನಾರದ ಸತ್ಯಲೋಕದಿ |
ಸರಸಿಜಾಸನ ಮನುಮುನಿಗಳೊಡ |
ವೆರವುತೋಲಗವಿತ್ತು ಸಂತಸ | ಭರಿತನಾಗಿ ||1||

ಕರೆದು ವಾಣಿಯ ಸುತೆಯಹಲ್ಯೆಗೆ |
ಸರಿಯುತಿದೆ ಹದಿಹರೆಯ ಕಾಲದಿ |
ಪರಿಣಯವನೆಸಗದಿರೆ ಮನಸಿಗೆ | ಕೊರತೆಯೈಸೆ ||2||

ವರನನಾರಿಸು ನೀನು ನಮ್ಮಯ |
ತರಳೆಗೆನಲೀ ನುಡಿಯ ಕೇಳುತ |
ಕಿರುನಗೆಯೊಳಾ ಬ್ರಾಹ್ಮಿ ಕಾಂತನ | ಚರಣಕೆರಗಿ ||3|| 15 ||

**ಸುರುಟಿ - ಏಕ**
ತನುಭವರೆಲ್ಲಿಹರು | ಪ್ರಿಯ ತವ |
ಮನಸಿಜರಲ್ಲವರು ||
ಜನನಿಯೆನಿಪಯ | ನ್ನಣಿಕೆಯನೆಲ್ಲವ |
ಒಣಗಿಸುತೀಪರಿ | ಇನಿಯ ಛೇಡಿಸದಿರು ||1||

ಹೊರುವ ಹೆರುವ ಕೆಡುಕು | ಯೌವನ |
ಕರಗಿಸುತಿಹ ಬದುಕು ||
ಚಿರನೂತನೆ ನೀ | ನಿರಬೇಕವನಿಯ |
ತರಳರ ತಾಯೆಂ | ದರಿದರೆ ಸಾಕು ||2||

ಸಾಕುವ ಹೊಣೆಯಿಲ್ಲ | ಮಕ್ಕಳ |
ವ್ಯಾಕುಲಕೆಣೆಯಿಲ್ಲ ||
ಲೋಕಪಿತಾಮಹ | ಸಾಕೇ ಮೈಸುಖ |
ನಾ ಕುವರರ ಹೆರ | ಬೇಕೈ ನಲ್ಲ ||3|| 18 ||

**ಭಾಮಿನಿ**
ಮಾದಳಾಧರೆ ಬ್ರಾಹ್ಮಿ ಸಾಕೀ |
ವಾದವಾವನ್ಯೋನ್ಯರೆಮ್ಮಿಂ |
ದಾದುದೀಜಗನಾವೆ ನಮ್ಮೊಳಗಾದಪುದು ಲಯವು ||
ಭೇದವಿಲ್ಲವು ಪ್ರಕೃತಿ ಪುರುಷರೊ |
ಳಾದಿಯಾರೆಂದಿಲ್ಲವರಿತು ವಿ |
ನೋದವೇಕೆನುತಿರುವ ಸಭೆಗುನ್ಮಾದದಿಂ ಮಘವ ||1|| 19 ||

**ಮಧುಮಾಧವಿ - ತ್ರಿವುಡೆ**
ಬಂದು ದೂರದಿ ಕಂಡಹಲ್ಯಾ |
ಸುಂದರಿಯ ಹೊಂದದಿರೆ ತನಗಿರು |
ವಂದವೈಸಿರಿಯೆಲ್ಲ ನಿಷ್ಫಲ |
ವೆಂದು ಮನದಲಿ ಬೇಗುದಿ ||1||

ಹೊಂದಿ ಮುನ್ನಡೆದಬುಜಪೀಠಗೆ |
ವಂದಿಸುತ ಶಿರಬಾಗಿ ನಿಂದನು |
ಚಂದದಿಂ ಮನ್ನಿಸುತ ಕುಶಲವೆ |
ಎಂದಡಜನೊಳು ಮಘವನು ||2|| 21 ||

**ಸೌರಾಷ್ಟ್ರ – ತ್ರಿವುಡೆ**
ಕರವ ಮುಗಿಯುತ ದಯದಿ ನಿನ್ನೀ |
ತರಳೆಯನು ಎನಗಿತ್ತು ಪೊರೆಯೆನೆ |
ಸರಸಿಜಾಸನಗೆರಗಿ ಗೌತಮ | ನೊರೆದನಾಗ ||1|| 22 ||

**ಕಾಂಭೋದಿ - ಝಂಪೆ**
ಲೋಕಕರ್ತನೆ ದಯದೊ | ಳೀ ಕುಮಾರಕಿಯಳನು |
ನೀ ಕರುಣಿಸೆನಗೆ ಸತಿಯಾಗಿ ||
ನಾ ಕುವರರಂ ಪಡೆದು | ನೂಕಿ ಪುನ್ನರಕವನು |
ಸಾಕುತಿಹೆನನಿಶ ಲೇಸಾಗಿ ||1||

ಲೋಭದಿಂದಿಂದ್ರ ಹರಿ | ನಾಭಿಸಂಭವಗೆಂದ |
ನೀ ಬಲ್ಲೆಯೈಸೆ ತೇರ್ಗಡೆಯ ||
ಈ ಭಿಕಾರಿಗೆ ಕೊಟ್ಟ | ರಾಭೀಷ್ಟ ಸುತೆಗಹುದೆ |
ನಾ ಭರಿಪೆ ಮೂಲೋಕದೊಡೆಯ ||2||

ಸಿದ್ಧರೆಮ್ಮಯ ರೋಮ | ಕಿದ್ದ ಬೆಲೆಯಿವಗಿಹುದೆ |
ಇದ್ದೂರಗೈದು ಸ್ವರ್ಗವನು ||
ಬದ್ಧದಮರಾವತಿಯ | ದಗ್ಧಿಸುವ ಸಾಮರ್ಥ್ಯ|
ಸಿದ್ಧಿಯೆಮಗೆಂದ ಗೌತಮನು ||3|| 25 ||

**ಭೈರವಿ - ಅಷ್ಟ**
ನೆನೆದಿಷ್ಟಗಳು ಸಂಭವ | ಇರ್ದರು ಮುನಿ |
ಮನುಜ ನೋಡಬುಜಭವ ||
ಅನಿಮಿಷಪತಿ ನಾನ | ಗಣಿತ ಸಂಪದದೊಡ |
ನನಿಶ ಸೌಖ್ಯವನುಂಬವ ||1||

ದನುಜರೆಂದರೆ ಓಡುವ | ತನುವ ಗಿರಿ |
ವನದಲಿ ಬೈತಿಡುವ ||
ಘನಹೇಡಿ ಮತ್ತಪೋ | ಧನ ಚಿರಮುನಿ ಸಿರಿ |
ಗೆಣೆಯುಂಟೆ ಪೇಳು ದೇವ ||2||

ಸುರಪಾಲನರಮನೆಯ | ವೈಭವವೆಲ್ಲಿ |
ಧರೆ ಎಲೆಛಾವಣಿಯ ||
ನರಕಯಾತನೆಯಲ್ಲಿ | ಅರಸಿಕನಿವ ಕೊಡು |
ಸರಸಿಯನೆನಗೆ ಜೀಯ ||3||

ಸತಿಯೋರ್ವಳಿವಗಿಹಳು | ಪೌಲಮಿ ರೂಪ |
ವತಿ ಸಾಧ್ವಿಯಾಗಿಹಳು ||
ಅತಿಕಾಮಿಯಿವ ವೇಶ್ಯಾ | ರತಗಿತ್ತಣುಗೆಗಧೋ |
ಗತಿಗೈಯದಿರು ಕೃಪಾಳು ||4|| 29 ||

**ಭಾಮಿನಿ**
ಕೋಪದಿಂದಿವರಿಂತು ಸೆಣಸಿದ |
ಡಾಪಜಾಸನ ತಡೆವುತುಭಯರು |
ಮಾಪುರುಷರಾರಿಕೆಗೆ ಗೈವುದು ಭೂಪ್ರದಕ್ಷಿಣೆಯ ||
ಓಪೆಯಾಪಳು ಮೊದಲು ಬಂದವ |
ಗೀ ಪದುಮಮುಖಿಯೆಂದಡಿಂದ್ರನು |
ತಾ ಪಡೆಯದಿರೆನೆನುತ ಪುಂಗಜದಾ ಪೆಗಲನೇರಿ ||1|| 30 ||

**ಮಾರವಿ - ಏಕ**
ರೂಢಿಗಿಳಿದ ಗತಿ | ಗಾಢಕೆ ಗಜ ತನು |
ವೀಡಾಡುವ ತೆರದಿ ||
ಓಡಿದ ಮುನಿಪನ | ಗಾಡಿದ ಯುಕ್ತಿಯ |
ಮಾಡಿದ ಸುಸ್ಥಿರದಿ ||1||

ಕ್ಷೀರಮನೆಯೊಳಿರೆ | ನೀರ್ಮಜ್ಜಿಗೆಗೂ |
ರೂರನಲೆವ ಮರುಳ ||
ತೋರುವೆ ಮುನಿಗಳ | ಪಾರ ಧಿಶಕ್ತಿಯ |
ಪೀರಲದರ ತಿರುಳ ||2||

ಸಾದರದಲಿ ವಿ | ಶ್ವೋದರ ಬೊಮ್ಮನ |
ಗೈದು ಪ್ರದಕ್ಷಿಣೆಯ ||
ಪಾದದೊಳೆರಗುತ | ಮೋದದಿ ಕುಳಿತ ಶ |
ಚೀಧವ ಮೇದಿನಿಯ ||3|| 33 ||

**ಕಂದ ಪದ್ಯ**
ಉರುತರ ವೇಗದಿ ಸುತ್ತಿದು |
ಹರುಷದಿ ಬರುತ ವಿರಿಂಚಿಗೆ ಶಿರಬಾಗುತ್ತಂ ||
ಹೊರಡದ ಗೌತಮನಿರವಂ |
ಪರಿಕಿಸಿ ಗೆಲಿದುಬ್ಬಿನೊಳಂ ಸುರಪತಿ ನಗುತಂ ||1|| 34 ||

**ನವರೋಜು - ಏಕ**
ಲಲನೆಯ ಪೊಂದುವ ಮುನಿಪ | ತಾ |
ಕುಳಿತಲ್ಲೇ ಮಲಗಿರ್ಪ ||
ಗಳಿಸಲು ಬಯಕೆಯ | ಬಲಬೇಕವನಿಯ |
ಬಳಸುತ ಬಂದಿಹೆ | ನಲಘು ಪ್ರತಾಪ ||1||

ಹೆಣ್ಣನು ಗೆದ್ದಿಹೆ ನಾನು | ದಿಟ |
ಗಣ್ಯ ಮಾವನು ನೀನು ||
ಎಣ್ಣುವೆಯೇನ ಹಿ | ರಣ್ಯೋದರ ನಗೆ |
ಬಣ್ಣವೆ ಕರೆಸೈ | ಕನ್ನಿಕೆಯಳನು ||2|| 36 ||

**ಭಾಮಿನಿ**
ಜಲಜಸಂಭವ ನುಡಿದ ನಗುತಲಿ |
ಬಲದೊಡನೆ ಚಾತುರ್ಯವಿಲ್ಲದೆ |
ಫಲಿಸದಾವುದು ದಿಟವು ನಿನ್ನಗ್ಗಳಿಕೆಯತಿಯಾಯ್ತು ||
ನಿಲಿಸಿದರ ವಿಶ್ರಮಿಸು ಕನ್ನಿಕೆ |
ಗೆಲಿದವನ ಹೊರತನ್ಯಗಾಗಳು |
ತಿಳಿಯೆನುತಲಾಕ್ಷಣವೆ ಕರೆಸಿದ ಚೆಲುವ ಬಾಲಕಿಯ ||1|| 37 ||

**ಬೇಗಡೆ - ತ್ರಿವುಡೆ**
ಕರೆಯ ಕೇಳುತಹಲ್ಯೆ | ಭರಿತ ಹರುಷದಿ |
ಪೊರಟಳೊಯ್ಯನೆ ನಗೆ | ಯರಳ ವರುಷದಿ ||
ನೆರೆದರೆಲ್ಲರನದ್ದಿ | ತರಳೆ ವಿಲಸದಿ |
ಪರಿಮಳಿಸುವ ಮಯ್ಯ | ಸಿರಿಯಾಕರುಷದಿ || ಪ ||
ಸ್ಮರಧನು ಭ್ರೂ | ಸರಸಿಜಾಂಬಕಿ |
ಗುರುಪಯೋಧರೆ | ವರನಿತಂಬಿನಿ ||
ಕುರುಳ ಮೇಣ್ ಮುಂ | ಜೆರಗ ತಿದ್ದುತ |
ಬರುತಲಯ್ಯಂ | ಗೆರಗೆ ಸರಸದಿ || ಕರೆಯ || 1 || 38 ||

**ಕೇದಾರಗೌಳ - ಅಷ್ಟ**
ಅಣುಗೆಗಾಶೀರ್ವಾದ | ವನು ಗೈದು ಗುಪಿತದಿ |
ವನಜಸಂಭವನೆಂದನು ||
ಜನಜನಿತದಿ ಪಣ | ಹಣೆದಿಹ ಗೌತಮ |
ಮುನಿಗೆ ಪೂಮಾಲೆಯನು ||1||

ತೊಡಿಸೆಂದು ಹಾರವ | ಕೊಡಲು ಕೊಂಡೆರಗುತ |
ಬೆಡಗಿ ಮುಂದಡಿಯಿಡುತ ||
ಬಿಡುಗಣ್ಣಪತಿಯ ಮುಂ | ಗಡೆಯೆ ಮಾಲೆಯ ಮುನಿ |
ಮೃಡನಿಗಿಕ್ಕಲು ನೋಡುತ ||2||

ಹರುಷೋದ್ಗಾರದಿ ಸಭೆ | ಕರತಾಡನವಗೈದು |
ಶರಧಿ ಘೋಷವ ಮಾಡಿತು ||
ಪರಿಕಿಸುತಮರೇಂದ್ರ | ನುರಿದೆದ್ದ ನಯನದಿ |
ಹರನಕ್ಷಿಗಿಡಿಯಾಡಿತು ||3|| 41 ||

**ಸೌರಾಷ್ಟ್ರ - ತ್ರಿವುಡೆ**
ಅರರೆ ಏನನ್ಯಾಯ ದ್ರೋಹವ |
ಸರಸಿಜೋದ್ಭವ ಗೈದನರಿತಿದ |
ನೆರೆದ ಸಭೆಯನುಮೋದಿಸುವುದೇ | ಕರವ ಹೊಯ್ದು ||1||

ತರಳೆಗೀ ಹುಲು ಹಾರ್ವನೆಂದಿರೆ |
ಬರಿದೆ ತಿರುಗಿಸಲೇತಕೆನ್ನನು |
ಅರುಹು ಮೊದಲೆನೆ ನಗುತಬುಜಭವ | ಸುರಪಗೆಂದ ||2|| 43 ||

**ಕೇದಾರಗೌಳ - ಝಂಪೆ**
ಪಾಕಶಾಸನ ಸೈರಿಸು | ಕೋಪವವಿ |
ವೇಕ ಸಲ್ಲದು ಲಾಲಿಸು ||
ವಾಕುಗೆಲಿದವನೀಕ್ಷಿಸು | ದೈರ್ಘ್ಯತಮ |
ಯಾಕಿನ್ನು ನುಡಿಯ ಬಳಸು ||1||

ಲೋಕಪಿತ ನೀ ಸಟೆಯನು | ನುಡಿಯೆ ಹುಲು |
ಲೌಕಿಕರ ಮಾಳ್ಕೆಯೇನು ||
ನಾಕದಾಣ್ಮನ ಬಲವನು | ಮೀರಿಪನೆ |
ಕಾಕುಮುನಿ ಜರಡನಿವನು ||2||

ಅಮರಪತಿ ಬಲವಗರ್ವದಿ | ಸೋತೆ ಗೌ |
ತಮ ಗೆಲಿದ ಚಾತುರ್ಯದಿ ||
ಗಮನಿಸಿಹುದಂತರ್ಯದಿ | ಮುನಿನಿಕರ |
ಸಮನಿಸುವುದಿದ ತ್ವರ್ಯದಿ ||3|| 46 ||

**ವೃಂದಾವನ ಸಾರಂಗ - ಏಕ**
ಕೇಳುತ ಗುರು ಮುದ ತಾಳಿದ | ಇಂದ್ರ |
ತಾಳುತಾಳೆನುತೆದ್ದ ಪೇಳಿದ ||ಪಲ್ಲ||
ಹಾಳು ಕ್ರೋಧವ ತೆಗೆ | ಪೇಳುವೆನಿದ್ದುದ | ಕೇಳುತ ||ಅ.ಪ.||
ಬಲವೊಂದೆ ಸಾಲದು ಗೆಲುಮೆಗೆ | ಬುದ್ಧಿ |
ಮಿಲನ ಬೇಕೈ ಸಿದ್ಧಿಯೊಲುಮೆಗೆ ||
ಗೆಲಿದ ಗೌತಮ ಯುಕ್ತಿ | ಯಲಿ ಸರ್ವಂದಿರಿಗೆ || ಕೇಳುತ ||1||

ಈ ಕಮಲಜನಲ್ಲೇ | ಲೋಕವು | ಇದೆ |
ತಾ ಕಾಂಬುದದರ ವಿ | ವೇಕವು ||
ತಾ ಕುಳಿತನು ಸುತ್ತಿ | ಸಾಕಲ್ಯವಾಕುವು || ಕೇಳುತ ||2||

ಸತಿಪತಿಗಳನಭಿ | ನಂದಿಸು | ಲೋಕ |
ಪಿತನ ಪದಾಬ್ಜಕೆ | ವಂದಿಸು ||
ಹತಿಯ ಸಹಿಸು ಧರ್ಮ | ಚ್ಯುತನಲ್ಲವೆನ್ನಿಸು || ಕೇಳುತ ||3|| 49 ||

**ಭಾಮಿನಿ**
ಗುರುವಚನ ಸನ್ಮಾನ್ಯ ಗೌತಮ |
ನಿರುವ ಮೊಮ್ಮಗ ನಿನಗೆ ಶಂಕೆಯ |
ತರುವುದಿದು ಪರಿಹಾರವೇನೆಂದೊರೆದನಮರೇಂದ್ರ ||
ಮರುಳೆ ಕೇಳಾಚಾರ್ಯನುಡಿಯುರು |
ತರವು ಸಂಶಯ ನಾಶಕಾರಿಯು |
ದುರುಳತನವಿದ ತ್ಯಜಿಪುದೆಂದನು ಸುರಪಗಾಜೀವ ||1|| 50 ||

**ಸಾಂಗತ್ಯ - ರೂಪಕ**
ಗುರುವಿಂತು ಝಂಕಿಸೆ | ಸುರಪ ನಾಚುತಲ್ಯೈದಿ |
ಶರಜಜನ್ಮಿಯ ಪಾದಕೆರಗಿ ||
ತರಳನ ಬಾಲಿಶಾ | ಚರಣೆಯ ಕ್ಷಮಿಸೆಂದು |
ತೆರಳಿದ ಮನದಿ ತಾ ಕರಗಿ ||1||

ಇತ್ತಲಬುಜಭವ | ಪುತ್ರಿಯ ಪ್ರಾದ್ವೇಷ |
ಗಿತ್ತನು ವಿಧ್ಯುಕ್ತವಾಗಿ ||
ತಪ್ತ ಮೌನಿಗಳಜ | ರಿತ್ತಾಶೀರ್ವಾದವ |
ಪೊತ್ತು ಸಾಗಿದನು ಲೇಸಾಗಿ ||2||

ರಮಣಿಯೊಡನೆ ತನ್ನ | ಶ್ರಮದೆಡೆಗೈತಂದು |
ಸುಮುಹೂರ್ತದಲಿ ಪ್ರವೇಶಿಸುತ ||
ಪ್ರಮದೆಯಳಲಿ ಕಾಲ | ಕ್ರಮದಿ ಪುತ್ರನ ಪೊಂದಿ |
ಯಮಿಪನಿರ್ದನು ವಿಶ್ರಮಿಸುತ ||3|| 53 ||

(ಇತಿ ಪ್ರಥಮ ಪರ್ಯಾಯಃ)

(ಅಥ ದ್ವಿತೀಯಃ)

**ವಾರ್ಧಕ**
ಪುತ್ರಕಾಮದಿ ಯಕ್ಷಪತಿ ಸುಕೇತಕ ಫಾಲ |
ನೇತ್ರ ವರದಿ ಸಹಸ್ರ ಹಸ್ತಿಬಲಯುತೆ ಸುತೆಯ |
ಹೆತ್ತು ತತ್ಕುಲಜ ಜರ್ಝರನಣುಗಗಿತ್ತರವ ಸತ್ತನನುಜಾತನಿಂದ ||
ಮತ್ತವಳೆ ತಾಟಕಿಯು ಅತ್ಯಧಿಕ ರೂಪವತಿ |
ಪೃಥ್ವಿಗಿಳಿಯುತ ಕುವರರೊತ್ತಿನಲಿ ಕಲುಷವನ |
ದತ್ತ ಬಂದಿರುತೊಂದು ಹೊತ್ತು ಕಾಮವಿಕಾರವೆತ್ತು ಸುತರನ್ನರಸುತ ||1|| 54 ||

**ಬೇಗಡೆ - ತ್ರಿವುಡೆ**
ಪೊರಟಳು ಘನಕೋಮಲೆ | ಕಾರಡವಿಯ |
ಚರಿಸುತ ಮತಿಭ್ರಮಲೆ ||ಪಲ್ಲ||
ಪೊರಟಳಾ ತಾಟಕಿಯು ವಿರಹದಿ |
ಕರಗಿ ನಾನಾ ದೆಸೆಯನರಸುತ ||
ತರಳರಹ ಮಾರೀಚ ಸುಭುಜರ |
ವೆರೆದು ಪುರುಷರ ಸ್ಮರಿಸುತಾಗಳೆ || ಪೊರಟಳು ||ಅ.ಪ.||
ತಕ್ಕ ಪ್ರಾಯದ ಪುರುಷ | ಈಗಿಲ್ಲಿಯೆ |
ಸಿಕ್ಕಿರೆನಿತು ಹರುಷ ||
ಉಕ್ಕುತ || ಪಿಡಿದೊಡನುಡುಗೆ ಕೈ |
ಯಿಕ್ಕುತ | ತೊಟ್ಟೊಸನಗಳ ಬಿ |
ಚ್ಚಿಕ್ಕುತ | ನಗ್ನವಗೊಳಿಸಿ ನಸು |
ನಕ್ಕು ತಾ || ಮುತ್ತಿಕ್ಕುತ ||
ತಕ್ಕು ತರಿಕಿಟ | ಧಿಕ್ಕು ಧಿಕು ಕುಣಿ |
ತಕ್ಕುಗಿಯೆ ಮದ | ವುಕ್ಕಿ ತೆಕ್ಕೆಗೆ ||
ಬಕ್ಕು ಮದನನ | ಸೊಕ್ಕು ಮುರಿದಪೆ |
ನಕ್ಕು ಮುದವೆನು | ತೊಕ್ಕಣಿಸುತಲೆ || ಪೊರಟಳು ||1|| 55 ||

**ಭಾಮಿನಿ**
ಕನವರಿಸುತೀ ತೆರದಿ ಯಕ್ಷಿಣಿ |
ಮನಸಿಜನ ವಶಳಾಗಿ ಬರುತಿರೆ |
ಘನತಪಸ್ವಿಯಗಸ್ತ್ಯ ಪೊರಟಿರೆ ವನಜಭವ ಸಭೆಗೆ ||
ವನಪಥದಿ ಸಾಗುತಿರೆ ಕಾಣುತ |
ಅಣುಗರನು ಹಿಂದಿರಿಸಿ ಸಾರುತ |
ಮನುಜನಲ್ಲಿವ ಮದನನಹ ಹಾಯೆನುತ ತಾಟಕಿಯು ||1|| 56 ||

**ನವರೋಜು – ಏಕ**
ಪೇರಿದ ಗಡ್ಡದ ಚಂದ | ಮೇ |
ಲೇರಿರುವ ಜಟೆಯಿಂದ ||
ಪೇರುವ ಭಸಿತ ಶ | ರೀರವದರ್ಬುದ |
ಸೂರಿಯ ತೇಜವ | ಬೀರುವಾನಂದ ||1||

ನಿಡುಗಪ್ಪು ಕೊನೆಮೀಸೆ | ಹೇ |
ರೊಡಲು ಕಣ್ಗೆ ತಮಾಷೆ ||
ನಡೆಗವನೀತಲ | ನಡುಗುವ ದಾರ್ಢ್ಯತೆ |
ಕಡುಬಲನೀತನ | ಬಿಡೆನಿದು ಭಾಷೆ ||2|| 58 ||

**ಕಂದ ಪೂರ್ವಾರ್ಧ**
ಎಂದುಬ್ಬಿನೊಳಡ್ಡೈಸುತ |
ಚಂದದಿ ಪಾಡುತ ಕುಣಿಯುತ ಬಂಧುರ ಗತಿಯಿಂ || 1 || 59 ||

**ದರ್ಬಾರ ಕಾನಡ - ಏಕ**
ಪ್ರಿಯಮನೋಜ | ತೇಜ |
ದಯಪಾಲಿಸು | ರಾಜ ||ಪಲ್ಲ||
ಬಯಕೆಗೆ ಸಹಜ | ವಯಸಿದುವೆ ನಿಜ |
ಸುರಕುಜ | ತೈ ತೈ ತೈ | ತದಿನ | ತಕದಿನ | ಪ್ರಿಯ ||1||

ಇರಿಯಿತು ಬಸುರ |
ಹಿರಿಯಿತು ಉಸುರ | ಸುಮಶರ ||
ಥೂಂ ಥೂಂ ಥೂಂ | ಥನನ |
ಥನ ನನನ ನನ || ಪ್ರಿಯ ||2||

ಸೇರಿಸು ಹೃದಯ | ಹೀರಿಸು ಸುಧೆಯ |
ಓ ಪ್ರಿಯ | ತೋಂ ತೋಂ ತೋಂ | ತನನ |
ತನನನ ನನ || ಪ್ರಿಯ ||3|| 62 ||

**ಕಂದ ಉತ್ತರಾರ್ಧ**
ಮುಂದರಿಯಲು ಮುನಿ ಹೇಸುತ |
ಹಿಂದೆ ಸರಿಯಲೊತ್ತುತ ಬಹಳೆಂದು ಖತಿಯಿಂ ||1|| 63 ||

**ಸೌರಾಷ್ಟ್ರ - ತ್ರಿವುಡೆ**
ಭ್ರಷ್ಟ ತೊಲತೊಲಗಾಚೆ ತಲೆಗಿಲೆ |
ಕೆಟ್ಟಿಹುದೆ ಬರಲೇತಕಿಲ್ಲಿಗೆ |
ಕುಟ್ಟಿ ಕೆಡಹುವೆ ಮುಟ್ಟಬಂದರೆ | ಕೆಟ್ಟ ಕೈಯ್ಯ ||1||

ಕುಂಭಸಂಭವ ಸಿದ್ಧಿಗಂಜುವ |
ರಂಬುಜಾಸನ ಸುರಪಮುಖ್ಯರು |
ಮುಂಬರಿದು ಕೆಡಬೇಡ ಪೇಳೇ | ನೆಂಬ ನಿಜವ ||2|| 65 ||

**ಸುರುಟಿ - ರೂಪಕ**
ಗದರಬೇಡ ವಧುವು ನೋಡಾ |
ಚದುರೆ ಯಕ್ಷಿಣಿ ||
ಮದುವೆಯಾಗಿ ಮದನಕೇಳಿ |
ಗೊದಗಿ ಸಲಹು ನೀ || 1 || 66 ||

**ಕಾಂಭೋದಿ - ಏಕ**
ಒಳ್ಳೆ ಮಾತಿನಲ್ಲಿ ಪೇಳ್ವೆ |
ಸಲ್ಲದಿದುವೆ ಕ್ಷುದ್ರೆ ||
ಒಳ್ಳಿತಲ್ಲ ಸಲುಗೆ ಇಹಳು |
ನಲ್ಲೆ ಲೋಪಾಮುದ್ರೆ || 1 || 67 ||

**ಸುರುಟಿ - ರೂಪಕ**
ಲಲನೆಯವಳು ಹಳಸು ನವ್ಯ |
ಚೆಲುವೆಯೆನ್ನಯ ||
ಒಲವ ನೋಡು ಒಲಿದು ಕೂಡು |
ಗೆಲವ ನಿನ್ನಯ ||1|| 68 ||

**ಘಂಟಾರವ - ಅಷ್ಟ**
ಭ್ರಷ್ಟ ಮಾತಿದ ಬಿಟ್ಟುತ್ತ ತೊಲಗೆಲೆ |
ದುಷ್ಟೆ ನಿಂತರೆ | ದೃಷ್ಟಿ ಪಾತದಿ |
ಸುಟ್ಟು ಬೂದಿಯ ಗೈವೆನು ||1|| 69 ||

**ಶಂಕರಾಭರಣ - ತ್ರಿವುಡೆ**
ಸುಟ್ಟು ಕಳೆಯಲಿಕೇನಿಹುದು ಸ್ಮರ |
ಸುಟ್ಟನಾಗಳೆ ತನುವನು ||
ಬಟ್ಟಕುಚಗಳ ಮುಟ್ಟು ರತಿಸುಖ |
ಕೊಟ್ಟು ಸಲಹು ||1||

ಬಿಡೆನೆನುತ ಬಿಗಿದಪ್ಪಿ ಚುಂಬನ |
ವಿಡಲಿಕವಳ ಕೆಡಹುತ ||
ಝಡಿದನೆಡಗಾಲಿಂದ ಕೂಗಿದ |
ಳೊಡನೆ ದುರುಳೆ ||2|| 71 ||

**ಘಂಟಾರವ - ಅಷ್ಟ**
ಕೇಳಿ ಬಂದರು | ಬಾಲರವ್ವೆಯ ಕೂಡಿ ||
ಕಾಲನಾಳೆನೆ ದಾಳಿಸಿರ್ದಯತಿ |
ಪಾಲ ರುದ್ರಾವೇಶದಿ ||1||

ಶಾಪವಿತ್ತನು | ರೂಪಗರ್ವದೊಳಿಂತು ||
ಪಾಪಗೈದೆ ಕುರೂಪಿ ರಕ್ಕಸಿ |
ಯಾಪುವುದು ನೀನೆನ್ನುತ ||2||

ಪೋರರೀರ್ವರು | ಘೋರದಾನವರಾಗಿ |
ಕಾರಡವಿಯನು ಸೇರಿರೆನ್ನುತ |
ಸಾರಿದನು ಮುನಿಯಾಕ್ಷಣ ||3|| 74 ||

**ಭಾಮಿನಿ**
ಇತ್ತು ಶಾಪವನಿಂತಗಸ್ತ್ಯನು |
ಸತ್ಯಲೋಕಕೆ ಸಾರ್ದನಿತ್ತಲು |
ತೆತ್ತಹಲ್ಯೆಗೆ ಮನವ ತತ್ತರಿಸುತ್ತಲಮರೇಂದ್ರ ||
ಎತ್ತಣೆನ್ನೈಸಿರಿಯು ಬಡಮುನಿ |
ಯೆತ್ತಣವ ಸತಿಯಾದಳಾತಗೆ |
ಮತ್ತಕಾಶಿನಿಯಗಲಿಕೆಗೆ ನಾ ಸತ್ತೆ ದಿಟವೆಂದ ||1|| 75 ||

**ಕಾಪಿ - ಅಷ್ಟ**
ಅರರೆ ಏನ್ ಶೃಂಗಾರಕಣಿಯು | ಕುಚ |
ವೆರಡು ಮನ್ಮಥನ ಕೂರಂಬಿನ ಕೊನೆಯು ||ಪಲ್ಲ||
ಸರಸಿಜಾಂಬಕಿಯು ಕಣ್ಮಣಿಯು | ಬಾಲ |
ತರುಣಿ ಸಹಸ್ರಪ್ರಕಾಶದಾನನೆಯು || ಅರರೆ ||ಅ.ಪ.||
ಸ್ಮರನ ಸಿಂಗಾಡಿ ಭ್ರೂಯುಗಳೆ | ಅಳಿ |
ಗುರುಳೆ ರದನಕುಂದ ಸುಂದರ ಮುಗುಳೆ ||
ವರಮಂದಸ್ಮಿತ ಚೆಂದುಟಿಗಳೆ | ಉರ |
ಕಿರಿವವು ಸರುವಥಾಸಹನವೀಜ್ವಾಲೆ || ಅರರೆ ||1||

ಒಂದು ಜಿಹ್ವೆಯೊಳಾಪುದೇನು | ಶೇಷ |
ನಿಂದಲಸಾಧ್ಯ ಬಣ್ಣಿಸೆ ಸೌಂದರ್ಯವನು ||
ಸುಂದರಿಯಳ ಮೈಸುಖವನು | ಒಮ್ಮೆ |
ಹೊಂದದೆ ಬದುಕಿರೆ ನಾನು || ಅರರೆ ||2||

ಪತಿವ್ರತೆಯರ ಸ್ತನಯುಗಳ | ಮೃಗ |
ಪತಿದಂಷ್ಟ್ರದಡಗು ಸಾಮ್ರಾಟರಾಸ್ತಿಗಳ ||
ಅತಿಕ್ರಮ ಗಂಟಲ ಗಾಳ | ಬುದ್ಧಿ |
ಚತುರತೆಯಿಂದ ಸಾಧಿಸುವೆ ಕಾರ್ಯಗಳ || ಅರರೆ ||3|| 78 ||

**ಕಂದ ಪದ್ಯ**
ಅನಿಮಿಷಪತಿ ಭೇದವನಿಂ |
ತೆಣಿಸುತ ಪೊರಮಡಲತ್ತಲ್ ಮುನಿ ದೈರ್ಘ್ಯತಮಂ ||
ಉಣುತಾ ನಿಶಿಯಂಗನೆ ಸಹಿ |
ತನುವಿಂದಿರಲಿಕಹಲ್ಯೆಯು ಮಣಿಯುತ ಪತಿಗಂ ||1|| 79 ||

**ಮಧ್ಯಮಾವತಿ - ಏಕ**
ಕನಸ ಕಂಡೆನು ನಿನ್ನೆ ದಿನ ನಸು ಮುಂಜಾನೆ |
ಮನ ನೆನೆದದರೆನ್ನ ಘನಿಸಿತು ಬವಣೆ ||
ನಿನಗೆಂದೆನಿನಿತೆನ್ನ ಎಣಿಸದೆ ಕವಲನ್ನೆ |
ವನಿತೆಯ ಮನಸನ್ನೆ ತಣಿಸು ಮಹಿಮನೆ ||1||

ನಾ ಒಬ್ಬಳಿಹ ಹೊತ್ತು ಹಾವೊಂದು ಬಂದಿತು |
ತೀವಿಯಿಂ ನುಂಗಿತು ಸಾವೆನಗಾಯ್ತು ||
ಭಾವದಿ ಭಯವಾಯ್ದು ಕೋವಿದಗೆಂದಾಯ್ತು |
ಯಾವುದಿಹುದೋ ಕುತ್ತು ದೇವಗೆ ಗೊತ್ತು ||2|| 81 ||

**ಸೌರಾಷ್ಟ್ರ - ತ್ರಿವುಡೆ**
ಎನಲು ನಸುನಗುತೆಂದ ಮುನಿಪತಿ |
ಕನಸು ತಾ ನನಸೆಂದಿಗಾಗದು |
ಮನದಿ ಭಯವಿದಕ್ಯಾಕೆ ತೆಗೆತೆಗೆ | ವನಜನೇತ್ರೆ ||1||

ಕಳವಳವು ಬಿಡದೆನ್ನ ಪ್ರಿಯಕರ |
ಬೆಳಗು ಜಾವದಿ ಕಂಡ ಕನಸದು |
ಫಲಿಸದಿರದಿದೆ ಚಿಂತೆಯೆಂದಳು | ಸುಲಲಿತಾಂಗಿ ||2||

ತ್ರಿಣಯ ಹರಿ ಬ್ರಹ್ಮಾಮರೇಂದ್ರರ |
ಗಣಿಸೆ ಮುನಿ ನಾ ಬಿನುಗನಲ್ಲೆಲೆ |
ವನಿತೆ ನಿನ್ನನು ತುಡುಕ ಬಂದರೆ | ಹಣಿವೆ ವಿಧಿಯ ||3|| 84 ||

**ವಾರ್ಧಕ**
ಹೀಗೆನುತ ದೃಢದಿ ನಿದ್ರಾಗಾರಕೈದೆ ಶತ |
ಯಾಗ ಹೊಂಚಿರೆ ಸಮಯ ತಾಗಿದುದು ನಡುರಾತ್ರಿ |
ಕೂಗಿದನು ಕುಕ್ಕುಟದೊಲಾಗ ಗೌತಮನುದಯವಾಗಿ ಹೋಯ್ತೆನುತೇಳುತ ||
ಸಾಗೆ ಪ್ರಾತರ್ವಿಧಿಗೆ ದೈರ್ಘ್ಯತಮ ವೇಷದಿಂ |
ಬಾಗಿಲಿಗೆ ಬಂದಿಂದ್ರ ನಾಗವೇಣಿಯ ಕರೆದ |
ರಾ ಗರುವೆಯೆದ್ದು ಬೆರಗಾಗಿ ಕದದೆರೆಯಲೊಳಪೋಗಿ ಕಾಪಟಿ ನಗುತಲಿ ||1|| 85 ||

**ಆರ್ಯ ಸವಾಯ್ - ಏಕ**
ತುಂಬೆಗುರುಳೆ ಬಾ | ಚುಂಬಿಸು ಗಾಢದಿ |
ಕುಂಭಕುಚಂಗಳನೆದೆಗೊತ್ತು ||
ಹಂಬಲವಿದು ಹೊಲ | ಸೆಂಬೆನು ತೆಗೆತೆಗೆ |
ಅಂಬುಜ ಸಖನುದಿಸುವ ಹೊತ್ತು ||1||

ಸಂದಿಹುದರೆ ನಿಶಿ | ಸುಂದರಿ ನಿನ್ನನು|
ಹೊಂದಲು ಬಂದೆನು ಕಾಮದಲಿ ||
ಸಂದ ಮುನಿಗಳರಿ | ವೃಂದವ ಗೆಲಿದವ |
ಕುಂದತರರು ನಿಜ ನೇಮದಲಿ ||2||

ಜಡಜಭವಾದ್ಯರ | ಕೆಡಿಸಿರುವನು ಸ್ಮರ |
ಬಡಮುನಿ ಯೆನ್ನಯ ಪಾಡೇನು ||
ಹುಡುಗಿಯೆ ನಾ ಸುರ | ಬೆಡಗಿಯೆ ನಿಯಮಿತ |
ಮಡದಿಯೊಳೀ ಹೊಸ ಮಾತೇನು ||3|| 88 ||

**ಸುರುಟಿ - ಏಕ**
ಹೊಸತಲ್ಲಿದು ಜಾಣೆ | ನಾ ಸುಮ |
ನಸರೊಡೆಯನು ಕಾಣೆ ||
ಶಶಿಮುಖಿಗೊಲಿದೀ | ರಸೆಯ ನಲಿದೆ ಋಷಿ |
ಎಸಗುತ ಮೋಸವ | ವಶಗೈದಿರುವನೆ ||1||

ಎನುತ ನಿಜವ ತೋರಿ | ಕಿರುನಗೆ |
ನನೆಯ ಮಳೆಯ ಬೀರಿ ||
ವನಜಾನನೆ ಬಾ | ತನುವನಲಂಗಿಸು |
ಕ್ಷಣದಲಿ ಕೊಲುವನು | ಮನುಮಥ ಮೀರಿ ||2||

ಮಾನಿನಿ ಕಿಡಿಯಿಡುತ | ಕೊಬ್ಬಿದ |
ಕೋಣನೆ ತೊಲಗತ್ತ ||
ಮಾನವನುಳಿದೀ | ಹೀನತೆಯೇ ಸತಿ |
ಏನೆಂದರಿದೆಯ | ಮಾನುಷನಾಥ ||3|| 91 ||

**ಕಾಂಭೋದಿ - ಏಕ**
ಮೂರು ಲೋಕಾಧಿಪನ ಭೋಗ |
ಕಾರು ಹಿಮ್ಮೆಟ್ಟುವರು ||
ಸಾರಿ ಬಂದ ಸ್ವರ್ಗ ಭಾಗ್ಯ |
ನಾರಿ ಹಿಂದಟ್ಟದಿರು ||1|| 92 ||

**ಮಾರವಿ - ಏಕ**
ಸುಡುಸುಡು ನಿನ್ನಯ | ಕಡುಹನು ಸಿರಿಯನು |
ದಡಿಗನೆ ಬಾಯ್ಮುಚ್ಚು ||
ಒಡಲಾಣ್ಮನ ಮೈಕಡೆಗೂದಲಿಗೆಣೆ |
ಬಿಡಿಪೆ ನಿನಗೆ ಹುಚ್ಚು ||1|| 93 ||

**ಭಾಮಿನಿ**
ನಲ್ಲೆಯರ ಒಲ್ಲೆಯದು ಒಪ್ಪಿಗೆ |
ಬಲ್ಲೆನೆಂದು ಬಿಡೌಜ ನಗುತಲಿ |
ಚೆಲ್ವೆಯನು ಸೆಳೆದಪ್ಪಿದನು ವಿಧಿಯಲ್ಲಿ ಸವನಿಸಿತು ||
ವಲ್ಲಭೆಯು ಜಾರಿದಳು ಗೌತಮ |
ನಲ್ಲ ಮುಂಜಾವೆನುತ ಶಂಕೆಯೊ |
ಳಿಲ್ಲಿಗೋಡುತ ಕಂಡು ನಯನದಿ ಚಲ್ಲಿ ಕೆಂಗಿಡಿಯ ||1|| 94 ||

**ಭೈರವಿ - ಅಷ್ಟ**
ಛಡ ಸುರಾಧಮನೆ ನೀನು | ಎನ್ನರಸಿಯ |
ಕೆಡಿಸೆ ಮೋಸವಗೈದನು ||
ಕೊಡುವೆ ಶಾಪವನಿದ | ಹಿಡಿಯೆಂದು ಕರದೊಳು |
ಜಡವಕೊಳ್ಳುತಲೆಂದನು ||1||

ಯೋನಿಲಂಪಟ ಪಾತಕಿ | ಸಾವಿರ ಭಗ |
ವಾನು ಮೈಯೊಳು ಘಾತಕಿ ||
ಶೂನ್ಯವಾಗಲಿ ಶಿಶ್ನ ಮೇಣ್ ವೃಷಣಗಳೆಂದ |
ತಾನು ಜಲವನು ಸೋಕಿ ||2||

ಖಳನ ರಾತ್ರಿಯ ಕಾಲದಿ | ನಾನಿಲ್ಲದಾ |
ಗೊಳಹೊಗಿಸಿದ ಮೂಲದಿ ||
ಶಿಲೆಯಾಗಿ ಬಿದ್ದಹು | ದಿಳೆಗೆಂದಹಲ್ಯೆಗೆ |
ತಳಿದ ಶಾಪವ ಜಲದಿ ||3|| 97 ||

**ಭಾಮಿನಿ**
ನುಡಿಗೆ ಕಂಪಿಸುತಶನಿ ಹೊಯ್ಲಿಂ |
ಗುಡಿವ ಸುರತರುವೆನೆ ಮಹಾಸತಿ |
ಕೆಡೆದು ದೊಪ್ಪನೆ ಪತಿಯ ಪಾದವ ಹಿಡಿದು ರೋದಿಸುತ ||
ಒಡಲರಸ ನೀನಲ್ಲದನ್ಯರ |
ಕಡೆ ನಯನದಲು ಕಂಡಳಲ್ಲವು |
ದೃಢವಿದೆನ್ನದನರಿತು ಶಪಿಸುತ ಕಡಿವಿರೇ ಕೊರಳ ||1|| 98 ||

**ಸಾಂಗತ್ಯ - ರೂಪಕ**
ಓಪ ಮನ್ನಿಸು ತವ | ರೂಪ ಧ್ವನಿಗಳಿಂದ |
ಆ ಪಿಸುಣನು ಬಂದು ಕರೆದ ||
ನಾ ಪೋಗಿಸಿದೆನೊಳ | ಗೀ ಪಾಪಿ ರತಿಗನು |
ವಾಪುದೆನುತಲೆನಗೊರೆದ ||1||

ಕಾಲವಲ್ಲೆನುತ ನಿ | ವಾಳಿಸಿದೆನು ಸುರ |
ಪಾಲ ತಾನೆನುತ ಮುಂದರಿದ ||
ತೋಳ ಬಲದೊಳೆನ್ನ | ಬೀಳಿಸುತವನಿಗೆ |
ಖೂಳ ಕೆಡಿಸಿದನಾದರದ ||2||

ಪರ್ವಿದಮಿತ ಕ್ರೋಧ | ಗರ್ವದಿ ಶಪಿಸಿದೆ |
ಸರ್ವಾಂಗ ಶುದ್ಧೆ ನಾನಿದಕೆ ||
ಶರ್ವ ಸಾಕ್ಷಿಯಿದೆ ಸು | ಪರ್ವಾಧಮನೆ ದೋಷಿ |
ಸರ್ವಜ್ಞ ಕ್ಷಮಿಸೆಂದು ಪದಕೆ ||3|| 101 ||

**ಭಾಮಿನಿ**
ವಂದಿಸುತ ಹೊರಳುತಿರೆ ಮುನಿ ದಯೆ |
ಯಿಂದ ಋಷಿನುಡಿ ಹುಸಿಯದೆಂದಿಗು |
ಮುಂದೆ ರಾಮನ ಪಾದಸ್ಪರ್ಶದಿ ಹೊಂದು ನಿಜ ತನುವ ||
ಎಂದೊಡನೆ ಶಿಲೆಯಾದಳಂಗನೆ |
ಕುಂದಿದುದು ಪುಂಸತ್ವ ನಖ ಶಿಖ |
ಬಂದ ಯೋನಿಯ ಕಂಡು ಕಾಲ್ವಿಡಿದಿಂದ್ರ ಗೌತಮನ ||1||102 ||

**ಭೈರವಿ - ಝಂಪೆ**
ಯತಿಪ ಭ್ರಾಂತಿಯೊಳಾನು | ಪತಿವ್ರತೆಯ ಕೆಡಿಸಿದೆನು |
ಅತಿಪಾಪಿ ಗೈಸಿದೆನು | ಸತಿಯ ಶಿಲೆಯನ್ನು ||1||

ಈ ಸೊಗಡು ಭಗವನ್ನು | ಸಾಸಿರವ ಪೊಂದಿದೆನು |
ಪುಂಸತ್ವವುಳಿದಾನು | ಹೇಸಿ ಬದುಕಿರೆನು ||2||

ಈ ಕುರೂಪವ ಹೊತ್ತು | ನಾಕಕೈದುವೆನೆಂತು |
ಕಾಕುತನವಿದ ಮರೆತು | ನೀ ಕರುಣೆಯಾಂತು ||3||

ಹರಿಯಾಜ್ಞೆ ಮತ್ಸತಿಯ | ಸ್ಮರಿಸುತಂಗಚ್ಯುತಿಯ |
ಮರೆಸಿ ಮುನ್ನಿನ ಸ್ಥಿತಿಯ | ಕರುಣಿಸೆನಗಾರ್ಯ ||4|| 106 ||

**ಭಾಮಿನಿ**
ಪರವಧುವ ತುಡುಕಿದನ ಬವಣೆಯು |
ಧರಣಿಗಾದಾದರ್ಶ ಸಾಕೈ |
ಕರುಣಿಸೆಂದುರುಳುವನ ಮೊಗಕುಗಿದುರಿದು ಮುನಿ ನುಡಿದ ||
ದುರುಳ ಕೃತಿಯಕ್ಷಮ್ಯ ಮನ್ನಿಸ |
ಲರಿದೆನುತಲುರಕೊದೆದು ಸ್ತಂಭಿಸಿ |
ಸುರಪತಿಯ ಕೆಡಹಿದನು ನಾರದ ಸರಿದ ದಿವಕಾಗ ||1|| 107 ||

**ಶಂಕರಾಭರಣ - ರೂಪಕ**
ಜಯತು ಜಯತು ಕೇಶವಾಯ | ಜಯ ಕೃಪಾಕರ |
ಜಯ ನಮೋಸ್ತು ಮಾಧವಾಯ | ಜಯತು ಶ್ರೀಕರ ||ಪಲ್ಲ||
ರೂಪ ಲೇಪಲೋಪರಹಿತ | ಆಪವಾಸನೆ ||
ಮೂಪೊಳಲ ನಿರ್ಮಾಪ ಸಲಹು | ವಾ ಪರೇಶನೆ ||1||

ಎನುತ ತನ್ನ ಮನೆಗೆ ಬಂದ | ಮುನಿಗೆ ಪೌಲಮಿ ||
ಮಣಿದು ಕೇಳ್ದಳೆನುವುದೊಸಗೆ | ಘನವ ಸಂಯಮಿ ||2||

ಭರ್ತನಲ್ಲಿ ನಿತ್ಯ ಪೋಪ | ಸತ್ಯಕಾಮನು ||
ಇತ್ತ ಬಂದ ಅರ್ಥವೇನ | ಮರ್ತ್ಯಪ್ರೇಮನು ||3|| 110 ||

**ಸಾಂಗತ್ಯ - ರೂಪಕ**
ಧವನೆಲ್ಲಿ ನಿನಗೆ ತ್ರೈ | ದಿವಕೆ ನಿನ್ನವಗೆ ಸಂ |
ಭವಿಸಿತು ಸಾಹಸ್ರಯೋನಿ ||
ಅವನತಮುಖನಾಗಿ | ಬುವಿಯೊಳು ಬಿದ್ದಿಹ |
ಬವಣೆಯೇನೆಂಬೆನಿಂದ್ರಾಣಿ ||1||

ಖುಲ್ಲಮಾನಸದೊಳಹಲ್ಯೆಗಳುಪೆ ಯತಿ |
ವಲ್ಲಭ ಗೌತಮನಿವಗೆ ||
ಸಲ್ಲಿಸಿ ಶಾಪವ | ನೆಲ್ಲವಕಳೆದಿಹ |
ಸೊಲ್ಲಿಸ ಬಂದೆ ನಾ ನಿನಗೆ ||2||

ಜಾರಿತು ಪೌರುಷ | ತೋರಿತು ಭಗ ಹತ್ತು |
ನೂರು ಸರ್ವಾಂಗಗಳಲ್ಲಿ ||
ಕ್ರೂರನ ಕ್ಷಮಿಸನು | ದಾರನ ಬೇಡಿಕೊ |
ಸಾರಲ್ಲಿ ನೀನೆ ಶೀಘ್ರದಲಿ ||3|| 113 ||

**ಭಾಮಿನಿ**
ಕಲ್ಲಾದಳೇ ಸಾಧ್ವಿಯಾಣ್ಮನ |
ಖುಲ್ಲತನಕೇನೆಂಬೆ ಮುನಿಪತಿ |
ಕೊಲ್ವುದಾದರು ಕೊಲ್ಲಲಿದ್ದೇನೊಲ್ಲಭನನುಳಿದು ||
ಫುಲ್ಲಲೋಚನೆ ಕರೆಯುತಪ್ಸರ |
ನಲ್ಲೆಯರು ಗುರು ಸಚಿವ ಸಹಿತಲಿ |
ನಿಲ್ಲದೋಡಿದಳಿಳೆಗೆ ಪೌಲಮಿ ಚೆಲ್ವುತಶ್ರುವನು ||1||

ನೋಡಿ ಶಚಿ ಶಿಲೆಯಾದಹಲ್ಯೆಯ |
ಕೋಡಿವರಿವಶ್ರು ಪ್ರವಾಹದಿ |
ರೂಢಿಗುರುಳುತಲೆದ್ದು ಕಂಡಳು ಕೇಡಿ ತತ್ಪತಿಯ ||
ಆಡಿಹುದು ನಯನದಲಿ ಕೆಂಗಿಡಿ |
ಖೋಡಿಗಿದುವೇ ಶಾಸ್ತ್ರಿಯಾದರು |
ಪಾಡು ಕೆಟ್ಟಿತು ತನ್ನದೆನ್ನುತ ಬೇಡಿದಳು ಮುನಿಯ || 2 || 115 ||

**ಸಾಂಗತ್ಯ - ರೂಪಕ**
ಶಾಪಾನುಗ್ರಹ ಶಕ್ತ | ಕೋಪ ತಾಪ ವಿಮುಕ್ತ |
ಪಾಪಗೈದಿಹನೆನ್ನ ಓಪ ||
ನಾ ಪುತ್ರಿಗೀ ಶಿಕ್ಷೆ | ಯಾವುದೇ ಪತಿಭಿಕ್ಷೆ |
ನೀ ಪದುಳದೊಳೀಯೋ ಮುನಿಪ ||1||

ಯಮಿಕುಲಾಗ್ರಣಿಯೆ ಪೌ | ಲಮಿಯಲ್ಲೀ ತರಳೆ ಗೌ |
ತಮಿಯೆಂದು ಕನಿಕರಪಟ್ಟು ||
ರಮಣನ ಕೃತ್ಯವ | ಕ್ಷಮಿಸಿ ಮುನ್ನಿನ ತೆರ |
ಸಮನಿಸೆಂದಳು ಕಣ್ಣೀರಿಟ್ಟು ||2|| 117 ||

**ನಾದನಾಮಕ್ರಿಯೆ- ಅಷ್ಟ**
ಅಳುತಿಂತು ಮುನಿಯ ಕಾಲ್ವಿಡಿದಳು | ಬಾಷ್ಪ |
ಜಲದಿ ಪಾದಂಗಳ ತೊಳೆದಳು ||
ಉಳಿಸೆನ್ನ ತಂದೆ ನೀ ದಯದೊಳು | ಕಾಂತ |
ನಲಘುದೋಷವ ಕ್ಷಮಿಸೆಂದಳು ||1||

ಗುರುದೇವ ನಗುತೀ ಮನ್ವಂತರ | ಕಿವ |
ನರಸು ತ್ರೈಜಗಕೆಂದ ಮಾವರ ||
ಹರಿಯಾಜ್ಞೆಗಪ್ಪುದಭ್ಯಂತರ | ಇದ |
ನರಿತು ಮನ್ನಿಸುವುದು ಸುಕುಮಾರ ||2|| 119 ||

**ಭಾಮಿನಿ**
ಮೌನಿನುಡಿ ಸಟೆಯಾಗದೈ ಮಗು |
ಯೋನಿಯದು ಕಣ್ಣಾಗಲನ್ಯರು |
ಕಾಣದಾಗಲಿ ಪೌರುಷಾಂಗವ ನೀನನುಗ್ರಹಿಸಿ ||
ಮಾನಿನಿಯ ಸಲಹೆನಲು ಗೌತಮ |
ತಾನನಿತ ಕರುಣಿಸಿದ ವಂದಿಸು |
ತಾನಿಮಿಷಪತಿ ಪೊರಟ ಗುರು ನಿಜರಾಣಿಯರ ಕೂಡಿ ||1|| 120 ||

**ಕಂದ ಪದ್ಯ**
ಕುಂದಕ ಮರೆಯಲ್ಕಾಕ್ಷಿತಾತ್ರ |
ನಂದವೆನುತ ದೈರ್ಘ್ಯತಮಂ ನಂದನ ಸಹಿತಂ ||
ನಿಂದನು ತಪದೊಳು ಕಾಲವು |
ಸಂದುದು ಮುಂಗಥೆಯೆಂದಪೆನೆಂದಂ ತ್ರಿಣಯಂ ||1|| 121 ||

(ಇತಿ ದ್ವಿತೀಯ ಪರ್ಯಾಯಃ)

(ಅಥ ತೃತೀಯ ಪರ್ಯಾಯಃ)

**ಸೌರಾಷ್ಟ್ರ - ತ್ರಿವುಡೆ**
ಇತ್ತಯೋಧ್ಯಾಪುರದಿ ದಶರಥ |
ನಿತ್ತನೋಲಗವೊಂದು ದಿನ ಬುಧ |
ಪತ್ತನಿಗ ಗುರು ಮಂತ್ರಿ ಪಾಠಕ | ಮೊತ್ತದೊಡನೆ ||1||

ಕರೆಸಿದನು ಸುತ ರಾಮ ಲಕ್ಷ್ಮಣ |
ಭರತ ಶತ್ರುಹರೆನಿಪ ನಾಲ್ವರ |
ಬರುತವರು ಪಿತಗೆರಗಿ ಕುಳಿತಿರೆ | ಹರುಷದಿಂದ ||2||

ಕರವನಿತ್ತಡಿಗೆಡೆದ ಮಂಡಲ |
ದರಸುಗಳ ಮನ್ನಿಸುತಲಜಸುತ |
ನಿರಲು ಕೌಶಿಕ ಬಂದ ವಾರ್ತೆಯ | ಚರರು ಪೇಳೆ ||3|| 124 ||

**ಭಾಮಿನಿ**
ಎಂದಡೀಕ್ಷಿಸಿ ನೃಪತಿ ದೂರದಿ |
ಹೊಂದುತಾನಂದವನು ಮನದಲಿ |
ಕಂದರೊಡನೊಡನೆದ್ದು ಸ್ವಾಗತಕೆಂದು ಹೊರವಂಟು ||
ಬಂದು ಮುನಿಪನನಾದರಿಸಿ ಕರೆ |
ತಂದು ಪೀಠದಿ ಕುಳ್ಳಿರಿಸಿ ವಿಧಿ |
ಯಿಂದ ಮಧುಪರ್ಕಾದಿ ಪೂಜೆಯ ನಂದದಿಂ ರಚಿಸಿ ||1|| 125 ||

**ಕೇದಾರಗೌಳ - ಅಷ್ಟ**
ಜನಪಸಾಷ್ಟಾಂಗ ವಂ | ದನೆಗೈದು ಕೇಳಿದ |
ಮುನಿಪನತ್ಯಪರೂಪದಿ ||
ಎನಗೆ ದರ್ಶನವಿತ್ತೆ | ಜನುಮ ಸಾರ್ಥಕ ಪದ |
ವನಜವಿದರ ಸ್ಪರ್ಶದಿ ||1||

ಕಾರ್ಯವಿಲ್ಲದೆ ಪೋಗ | ರಾರ್ಯರೆಲ್ಲಿಯು ಮುನಿ |
ವರ್ಯ ನೀ ಕರುಣದಿಂದ ||
ತ್ವರ್ಯದಿ ಪೇಳ್ವುದಂ | ತರ್ಯವನೆನೆ ಯತಿ |
ಯರ್ಯಮಕುಲಜಗೆಂದ ||2|| 127 ||

**ನಾದನಾಮಕ್ರಿಯೆ - ಅಷ್ಟ**
ಜನಪಾಲ ಕೇಳೆಮ್ಮ ಬವಣೆಯ | ಏನ |
ನೆನಲಯ್ಯೊ ದನುಜರಂಗವಣೆಯ ||ಪಲ್ಲ||
ಯಾಗಯೋಗಾಭ್ಯಾಸವಡಗಿತು | ಪೂರ್ಣ |
ವಾಗಿ ವೈದಿಕ ಕರ್ಮವುಡುಗಿತು ||
ಸಾಗದಾರ್ಯರ ಬಾಳೆಂದಾಯಿತು | ಆದ |
ಕಾಗಿಯೆ ಬರವಿಲ್ಲಿಗಾಯಿತು || 1||

ದುರುಳೆ ತಾಟಕಿ ಮಹಾಬಲಯುತೆ | ತ |
ತ್ತರಳ ಮಾರೀಚ ಸುಭುಜರಂತೆ ||
ನೆರವಿಯಸಂಖ್ಯೆವಿಹುದು ಮತ್ತೆ | ದಿನ |
ತೆರವುಗೊಡದೆ ಕಾಡುವಳು ಧೂರ್ತೆ ||2||

ಯಜ್ಞಕುಂಡವನೆಲ್ಲ ಕೆಡಿಸುತ್ತ | ಸಿಕ್ಕ |
ರೆಜ್ಞೋಪವೀತವ ಹರಿಯುತ್ತ ||
ಜಜ್ಜುವರುಪಟಳಕಂಜುತ |  ಬಂದೆ |
ಸಜ್ಜನ ನೀಕಾಯ್ವೆಯೆನ್ನುತ ||3|| 130 ||

**ಭಾಮಿನಿ**
ಕೇಳುತೀ ವಾಕ್ಯವನು ಕಲ್ಪದ |
ಕಾಲಭೈರವನಂತೆ ರೌದ್ರಾ |
ಭೀಳಲೋಚನನಾಗಿ ಕೆಡಹುತಲಾಲಿಯಲಿ ಕಿಡಿಯ ||
ಖೂಳ ಶಂಬರ ಮುಖ್ಯದನುಜರ |
ಕೋಳುಗೊಂಡೀ ದಶರಥನ ಬಿ |
ಲ್ಲಾಳುತನಕಿದಿರಹಳೆ ಖಳೆ ಹೆಮ್ಮಾಳಿ ತಾನೆನುತ ||1|| 131 ||

**ಮಾರವಿ - ಏಕ**
ಪೇಳಿದ ಮುನಿವರ | ಲಾಲಿಸು ಖೂಳರ |
ಮೇಳವ ಸದೆದೀಗ ||
ಪಾಲಿಪೆನೆಂದು ನೃ | ಪಾಲ ಸುಮಂತ್ರಗೆ |
ಕಾಳಗಕತಿಬೇಗ ||1||

ನೆರಹು ಚತುರ್ಬಲ | ಶರಧಿಯ ತಾಟಕೆ |
ದುರುಳೆಯ ತರುಬುತ್ತ ||
ಪರಿಭವಿಸುತ ತ | ತ್ತರಳರ ದಾನವ |
ನೆರವಿಯ ಸವರುತ್ತ ||2||

ಮುದಿಸುವೆ ಮುನಿಗಳ | ಮುದುಕನ ತೋಳ್ಬಲ |
ದಧಟಿಂಗಜ ಭವರು ||
ಬೆದರುವರೀಖಳ | ರಧಮರು ಗಣ್ಯರೆ |
ಎದೆಗೆಡರರಿತವರು ||3|| 134 ||

**ಕಾಂಭೋದಿ - ಝಂಪೆ**
ಹೊತ್ತುಗಳೆಯದೆ ಪೊರಡಿ | ರುತ್ಸಹದೊಳೆನೆ ಗಾಧಿ |
ಪುತ್ರ ನೃಪಗೆಂದ ನಗೆಮೊಗದಿ ||
ಪೃಥ್ವಿಪತಿಯತ್ಯಧಿಕ | ಸತ್ವಯುತ ಬಿಲ್ಲಾಳು |
ಮತ್ತಿಲ್ಲವೆಣೆಯು ಮೂಜಗದಿ ||1||

ಆದರೆಲ್ಲವು ಕಾಲ | ಭೇದದಿಂ ಬದಲಹುದು |
ಮೋದಲರಿದಿಂದವರ ಕಾದಿ ||
ಆ ದುರುಳೆ ಸಾಹಸ್ರ | ದಾದುಭುತಗಜಬಲಳು |
ಭೇದಿಸಲು ಬೇರುಂಟು ಹಾದಿ ||2||

ಆಗದದು ನಿನ್ನಿಂದ | ನಾ ಗೈವ ಮಖರಕ್ಷೆ |
ಗಾಗಿ ತವ ತನುಜಾತರಾದ ||
ರಾಘವನ ಕಳುಹು ಜತೆ | ಯಾಗಿ ಲಕ್ಷ್ಮಣ ಸಾಕು |
ಈಗಳೆನ್ನೊಡನೆ ನೀನೆಂದ ||3|| 137 ||

**ಭಾಮಿನಿ**
ನುಡಿಯದುವೆ ಶತಕೋಟಿ ಸಿಡಿಲಿನ |
ಝಡಿತವಾಯ್ತೆದೆಯೊಡೆದು ದಶರಥ |
ಕೆಡೆದ ಮೈಮರೆದಿಳೆಗೆ ಸುರಗಿರಿ ಕಡಿದು ಬೀಳ್ವಂತೆ ||
ನಡುಗಿದುದು ಸಭೆಯರಸ ಚೇತನ |
ವಡೆಯುತೊಯ್ಯನೆ ಬಿಡುತ ಕಂಗಳ |
ಒಡಲ ತಾಪದಿ ಮುನಿಯ ಕಾಲ್ಗಳ ಪಿಡಿಯುತಿಂತೆಂದ ||1|| 138 ||

**ಸೋಹನಿ – ಆದಿ ತ್ರಿವುಡೆ**
ತಂದೆ ಲಾಲಿಸು ಪುತ್ರಕಾಮದಿ |
ಒಂದು ಮತ್ತೊಂದೆನುತ ಮೂವರ |
ಹೊಂದಿದೆನು ಪತ್ನಿಯರ ಸುತಜನಿ | ಹೊಂದದಿರುವ || ಖೇದವ ||1||

ಹೊತ್ತು ಬಾಳಿದೆನಿಳೆಯೊಳಾನರು |
ವತ್ತು ಸಾವಿರ ವರುಷ ಕಡೆಯಲಿ |
ಇತ್ತ ಶ್ರೀಹರಿಯಿಷ್ಟಿಮುಖದೊಳು | ಪುತ್ರರಿವರ || ನಾಲ್ವರ ||2||

ತೊರೆದು ಜೀವಿಸಲಾರೆನೆಳೆಯರ |
ದುರುಳ ಖಳ ಹೆಮ್ಮಿತ್ತುಗಳ ಬಾಯ್ |
ದೆರೆಗೆ ನೂಕಿಸಲಾರೆ ಸಹಯಕೆ | ಬರುವೆ ನಾನೆ || ಮುನಿಪನೆ ||3|| 141 ||

**ಮಾರವಿ - ಏಕ**
ಕೆರಳುತ ಕೌಶಿಕ | ನರುವತ್ತರ ಭ್ರಮೆ |
ಶಿರಕಡರಿತೊ ನಿನಗೆ ||
ತರಳರ ನಾವೇ | ನರಿಯೆವೆ ಕೊಲಿಸಲು |
ಇರುವುದೆ ಹಗೆಯೆಮಗೆ ||1||

ಸ್ಪಷ್ಟವಖಿಲವೀ | ದೃಷ್ಟ ಪ್ರಪಂಚವು |
ನಷ್ಟವಹುದು ರಾಯ ||
ಬಿಟ್ಟಿರೆನೆಂಬೆಯ | ಪುತ್ರರ ಶ್ರೀಹರಿ |
ಯಿಷ್ಟವನರಿತಿಹೆಯಾ ||2||

ದಡಿಗರು ತೃಣಕೆಣೆ | ಜಡಜದಳಾಕ್ಷಗೆ |
ಒಡನಾನಿಹುದರಿಯಾ ||
ಹುಡುಗರನೊಯ್ಯದೆ | ಬಿಡೆನೆನೆ ಕೌಶಿಕ |
ನುಡಿದನು ಗುರುವರ್ಯ ||3|| 144 ||

**ಕಾಪಿ - ಅಷ್ಟ**
ಕೇಳಯ್ಯ ದಶರಥ ಭೂಪ | ಮುನಿ |
ಪಾಲ ವಿಶ್ವಾಮಿತ್ರನತುಲ ಪ್ರತಾಪ ||
ಖೂಳರ ದಹಿಸುವಾಟೋಪ | ಇರ್ದು |
ಬಾಲರೇಳ್ಗೆಗೆ ಬಂದ ತ್ಯಜಿಸಿ ವಿಲಾಪ ||1||

ಪುತ್ರರಿಗಸ್ತ್ರ ವಿದ್ಯೆಯನು | ನಾನೇ |
ಇತ್ತರು ಕೌಶಿಕ ತ್ರಿಣಯ ಸನ್ನಿಭನು ||
ಮತ್ತದ ಸಂಪೂರ್ಣವನ್ನು | ಗೈವ |
ನುತ್ತರೋತ್ತರವಕ್ಕು ಕಳುಹು ಬಾಲರನು ||2||

ಆಗದು ನನ್ನಿಂದೀಕಾರ್ಯ | ಆದ |
ರಾಗಮವರಿತು ಪೇಳಿಹ ಋಷಿವರ್ಯ ||
ರಾಘವನಿಗೆ ತೃಣವಯ್ಯ | ಎನೆ |
ಬಾಗಿ ಗಾಧಿಜಗೆಂದ ದೈನ್ಯದಿ ರಾಯ ||3|| 147 ||

**ಸಾಂಗತ್ಯ- ರೂಪಕ**
ಆರ್ಯನಾಣತಿಯನಿ | ವಾರ್ಯ ಮತ್ತದು ಶಿರೋ |
ಧಾರ್ಯ ಮನ್ನಿಸು ತಾಳಿ ಮುದವ ||
ಸೂರ್ಯಾನ್ವಯಾತ್ಮಜ | ಶೌರ್ಯಸಂವರ್ಧನ |
ಕಾರ್ಯ ಹೊಂದಿದೆ ನಿನ್ನ ಪದವ ||1||

ಶೀತಾತಪಂಗಳ | ನಾಂತವರಲ್ಲೆಳೆ |
ಪೋತರು ಬಳಲಿ ಕ್ಷುತ್‌ತೃಷೆಗೆ ||
ಕಾತರಿಸದ ತೆರ | ಪ್ರೀತಿಯಿಂದಲಿ ತನು |
ಜಾತರ ಸಲಹೆಂದು ಮುನಿಗೆ ||2||

ತನಯರನಿತ್ತಪ್ಪ | ಪಣೆಯ ನೊಸಲಿಗೊತ್ತಿ |
ಮುನಿಯ ಯಾಗವ ಕಾಯ್ದು ಜವದಿ ||
ಎನಗೆ ಕಾಣಿಸಿಕೊಂಬು | ದೆನುತ ಶೋಕಿಸೆ ರಾಮ |
ಮಣಿದೆಂದ ಗಂಭೀರ ರವದಿ ||3|| 150 ||

**ಮಾರವಿ - ಏಕ**
ಮರುಕವ ತೆಗೆಯೆ | ಧ್ವರಕಂಟಕರನು |
ತರಿಯುತ ಲೀಲೆಯಲಿ ||
ಬರುವೆವು ಕೆಲದಿನ | ಸರಿವುದು ಮುನಿಗಳ |
ಚರಣದ ಬಳಿಯಲ್ಲಿ ||1||

ಮುನಿದರೆ ತ್ರಿಣಯನ | ಗಣಿಸೆ ಸುರಾಸುರ |
ಗಣ ತೃಣಕೆಣೆಯೆನಗೆ ||
ಅಣುಗನ ಬಾಣದ | ಮೊನೆಗಿಲ್ಲೆಳೆತನ |
ವೆನುತೊಂದಿಸಿ ಪಿತಗೆ ||2|| 152 ||

**ಭಾಮಿನಿ**
ಬಿಲು ನಿಷಂಗವ ಧರಿಸಿ ಮುನಿಪದ |
ಜಲಜಕೊಂದಿಸುತನುಜ ಸಹಿತಲಿ |
ನಿಲಲವರ ಜೊತೆ ಪೊರಟು ಸರಯುವ ಕಳೆದು ಕೌಶಿಕನು ||
ತಿಳುಹಿ ಬಲವತಿಬಲ ರಹಸ್ಯವ |
ನಲಘು ಮುಕ್ತಾಮುಕ್ತಸಿದ್ಧಿಯ |
ಸಲೆ ಚತುಷ್ಟಯವರುಹಿದನು ರಘುಕುಲಜ ಮುನಿಗೆಂದ ||1|| 153 ||

**ನವರೋಜು - ಏಕ**
ಮುನಿಪ ಏನಿದು ಚಂದ | ಮೈ |
ಮನಕಾಹುದಾವಂದ ||
ಎನುವೆನದೇನೀ ವನಸಿರಿ ಪ್ರಕೃತಿಯ |
ಘನವಿಭವವ ಕಂ | ಡೆನು ನಿಮ್ಮಿಂದ ||1||

ಮುನಿಯೆಂದ ಪುರುಹೂತ | ವೃ |
ತ್ರನ ಕೊಂದ ಘನದುರಿತ ||
ವನು ಪದ್ಮಜ ತೊಳೆ | ದನುಮಿಲ್ಲಿಯೆ ತ |
ದ್ವನ ನೆಲಪಿದ ಕಾ | ನನವಿದು ಕಲುಷ ||2|| 155 ||

**ಕಂದ ಪದ್ಯ**
ತಕ್ಷಣ ಕುಂಭಜಶಾಪದಿ |
ರಕ್ಕಸಿಯಾಗಿಹ ತಾಟಕಿಯುಕ್ಕಿದ ಹಸಿವಿಂ ||
ಇಕ್ಕೆಲವರಸುತ ವನದೊಳು |
ಸಿಕ್ಕಿದ ಖಗಮಿಗಗಳ ಬಾಯ್ಗಿಕ್ಕುತ ಜವದಿಂ ||1|| 156 ||

**ಭೈರವಿ - ತ್ರಿವುಡೆ**
ಬಂದಳು | ದೈತ್ಯೆ | ಬಂದಳು ||ಪಲ್ಲ||
ಬಂದಳಾ ತಾಟಕಿಯು ಮನುಜರ |
ತಿಂದು ಬಹುದಿನವಾಯ್ತು ನಾಲಿಗೆ ||
ಗೊಂದು ರುಚಿಸದು ಸುಡಲಿ ಬಾಳಿದು |
ಎಂದು ಮನದಲಿ ಕಂದಿಕುಂದುತ || ಬಂದಳು ||1||

ಸಿಕ್ಕಿದರೆ ನರ ತೆಕ್ಕೆಯಲಿ ಮುರಿ |
ದುಕ್ಕಿ ಬಹ ಶೋಣಿತವ ನೆಕ್ಕುತ |
ಚೊಕ್ಕಿ ಮಾಂಸವನಿಕ್ಕುತೊಡಲಿಗೆ |
ನಕ್ಕು ನಲಿವೆನು ಸೊಕ್ಕುತೆನ್ನುತ || ಬಂದಳು || 2 ||

ಆರೊ ದೂರದಿ ತೋರ್ಪರಹಹಾ |
ಪೋರರೀರ್ವರು ಹಾರ್ವನೋರ್ವನು ||
ಮಾರವೈರಿಯಪಾರ ಕೃಪೆಯೆನು |
ತಾರುಭಟಿಸುತ ಘೋರದಾನವಿ || ಬಂದಳು ||3|| 159 ||

**ಸೌರಾಷ್ಟ್ರ - ತ್ರಿವುಡೆ**
ಆರುಭಟೆಯದ ಕೇಳಿ ಕೌಶಿಕ |
ನಾರಘೂದ್ವಹಗೆಂದನಸ್ತ್ರವ |
ನೇರಿಸಿವಳೀ ಮೊದಲ ಬಲಿಯ್ಯೆ | ಕ್ರೂರದನುಜೆ ||1||

ಚಿಣ್ಣನನು ಮನ್ನಿಪುದು ಗುರುಗಳು |
ಹೆಣ್ಣ ಕೊಲ್ಲುವನಲ್ಲ ದುರಿತವಿ |
ದನ್ವಯಕೆ ಮುಳಿವೆಂದ ರಾಘವ | ಖಿನ್ನನಾಗಿ ||2||

ಹೆಣ್ಣು ಗಂಡೆಂದಿಲ್ಲ ದನುಜರು |
ಮಣ್ಣಗೂಡಿಸು ಮೊದಲು ಹತಿಯಿರ |
ಲೆನ್ನ ಸೇರಲಿಯೆಂದ ಮುನಿ ಮು | ಕ್ಕಣ್ಣನಾಗಿ ||3|| 162 ||

**ಭೈರವಿ - ಅಷ್ಟ**
ನುಡಿ ಕೇಳಿ ಶಸ್ತ್ರೌಘವ | ಶಿಂಜಿನಿಗಿಟ್ಟು |
ತಡೆದು ದೈತ್ಯೆಯ ರಾಘವ ||
ದಡಿಗತನವ ತೋರ್ದ | ರೊಡಲ ಭೇದಿಸುವೆನು |
ನಡಿ ಹೊತ್ತು ಸುಡು ಮೊಗವ ||1||

ಅರೆತುತ್ತಿಗಹೆಯ ಪೋರ | ಒಮ್ಮೆಲೆ ಬಾಯಿ |
ಗಿರಿಸಿ ನಲಿದು ಮೂವರ ||
ಕುರಿಗೆ ಸಿಂಹಿಣಿಯಳು | ಸರಸವೆಯೆನೆ ಕಿಡಿ |
ಗರೆದು ಮಾಗಧಿ ಕುವರ ||2||

ಪೋರರೆಂಬೆಯ ನಿವಾಳಿ | ಒಂದಸ್ತ್ರದಿ |
ಹೀರುವೆನಸುವ ಮೂಳಿ ||
ನಾರಿಯೊ ನೀನು ವಿ | ಕಾರಿಯೊ ಸಾಯದೆ |
ಸಾರೆಂದ ಕಿಡಿಯುಗುಳಿ ||3|| 165 ||

**ಪಂತುವರಾಳಿ- ಮಟ್ಟೆ**
ನಾರಿಯಲ್ಲ ನಿಮಗೆ ಲಯದ | ಮಾರಿಯೆಂದಳು ||
ಪಾರಣೆಯನು ಗೈವೆನೆನುತ | ಕ್ರೂರಿ ಬಂದಳು ||
ಧೀರ ಲಕ್ಷ್ಮಣಾಂಕನುರಿಯ | ಕಾರಿ ಕಣ್ಣೊಳು ||
ಪೇರುರಕ್ಕಪಾರಶರವ | ತೂರೆ ದಿಣ್ಣಳು ||1||

ಕುಟ್ಟಿ ಮುರಿವುತದರ ಮುನಿಯ | ದೃಷ್ಟಿಪಾತದಿ |
ಸುಟ್ಟು ಕಳೆವ ತೆರದಿ ನೋಡು | ತಟ್ಟಹಾಸದಿ ||
ಮುಟ್ಟ ಬರಲು ರಾಮ ಶರದೊ | ಳಿಟ್ಟರೌದ್ರದಿ ||
ರಟ್ಟೆ ಕಡಿದು ಬಿದ್ದಳಿಳೆಗೆ | ಬೆಟ್ಟದಂದದಿ ||2||

ಹೊಡಕರಿಸುತಲೆದ್ದು ತಲೆಯ | ಕೊಡವಿ ರಕ್ಕಸಿ ||
ಎಡದ ಕರದಿ ಮರನ ಮುರಿದು | ಹಿಡಿಯಲೀಕ್ಷಿಸಿ ||
ಜಡಜನಾಭ ಕಡಿದ ತೋಳ | ಬುಡವ ಗರ್ಜಿಸಿ ||
ಜಡಿಯೆ ಪದವ ನೆಗಹಲೆರಡೂ | ತೊಡೆಯ ತುಂಡಿಸಿ ||3|| 168 ||

**ಭೈರವಿ - ಏಕ**
ಬಿನುಗು ನರರ ತರಿದುಂಬ | ಪರಿ |
ಯೆನುವೆಯ ಎಮ್ಮನು ತಿಂಬ ||
ಘನಮದ ಮೇಣ್ ಬಲಜಂಬ | ಎ |
ಲ್ಲೆನುತೆಸೆದನು ಕೂರಂಬ ||1||

ಶರವದ ತೃಣಕೆಣಿಸುತಲಿ | ಹರಿ |
ದರುಣಜಲದೊಳುರುಳುತಲಿ ||
ದುರುಳೆ ತಿಂಬೆನೆನುತಲಿ | ಬೊ |
ಬ್ಬಿರಿಯುತ ಬರೆ ಕಾಣುತಲಿ ||2||

ಉರುತರ ಮಂತ್ರಾಸ್ತ್ರದಲಿ | ರಘು |
ವರನಿಟ್ಟನು ಕನಲುತಲಿ ||
ಉರವನುರುಹೆ ಕ್ಷಿಪ್ರದಲಿ | ಶರ |
ಮರಣಿಸಿದಳು ಖಳೆಯೊರಲಿ ||3|| 171 ||

**ಭಾಮಿನಿ**
ಸಾರಿದನು ಮುನಿ ತನ್ನಿವಾಸಕೆ |
ಭೂರಿ ಮಧುಪರ್ಕಾದಿ ಪೂಜೆಯ |
ನಾರಘೂದ್ವಹಗಿತ್ತು ಮೇಣ್ ಸಂಭಾರಗಳ ನೆರಹಿ ||
ವೀರರೀರ್ವರ ರಕ್ಷೆಯಿಂದಲ |
ಪಾರ ಋಷಿಗಳ ಕೂಡಿ ಕೌಶಿಕ |
ಭಾರಿ ಹೋಮವ ಗೈದ ಧೂಮವದೇರಿತಂಬರವ ||1|| 172 ||

**ಸೌರಾಷ್ಟ್ರ - ತ್ರಿವುಡೆ**
ಸುತ್ತ ನಾಲ್ದೆಸೆ ಮುಸುಕಿತದನು |
ನೃತ್ತ ಖಳ ಮಾರೀಚ ಕಾಣುತ |
ತತ್ಸಹೋದರನಹ ಸುಬಾಹುವ | ನೊತ್ತಿ ಕರೆದು |1||

ಹೋಮಧೂಮವದೇನು ನಮ್ಮೀ |
ಸೀಮೆಗಿದುವೆ ನಿಷೇಧ ಗೈವು |
ದ್ದಾಮನಾವನೊ ನೋಳ್ಪ ಕರೆ ನಿ | ಸ್ಸೀಮ ಬಲವ ||2||

ಮುನಿಯೆ ಕಣೆಯೊಂದರಲಿ ಲೋಕವ |
ನೊಣೆವೆ ಹರಿ ಹರ ಸುರಪ ಮುಖ್ಯರ |
ಗಣಿಸೆನೆನ್ನಾಣತಿಯ ಮೀರ್ದನ | ಹೆಣವನುಂಬೆ ||3|| 175 ||

**ಮಾರವಿ - ಏಕ**
ವ್ಯಗ್ರದಿ ದನುಜಕು | ಲಾಗ್ರಣಿ ದೈತ್ಯ ಸ |
ಮಗ್ರರ ಕೂಡುತ | ನಿಗ್ರಹಿಸುವೆ ಬುಧ |
ರುಗ್ರುವನೆನ್ನುತ || ಬಂದನಾಗ | ದಾನವ | ಬಂದನಾಗ ||ಪಲ್ಲ||
ಲಕ್ಷ್ಮಣನಿರವ ನಿ | ರೀಕ್ಷಿಸಿ ಕೆಂಗಿಡಿ |
ದಕ್ಷಾರಿಯ ತೆರ | ನಕ್ಷಿಯೊಳುಗುಳುತ ||
ಉಕ್ಕಿಸಿ ಧನುವಿಂ | ದಕ್ಷಯಶರವನು |
ಲಕ್ಷ ದನುಜರನು | ತಕ್ಷಣ ಸವರಿದ |
ಏನನೆಂಬೆ | ಸಾಹಸ | ವೇನನೆಂಬೆ ||1|| 176 ||

**ಭಾಮಿನಿ**
ಪಡೆಯಳಿಯೆ ಮಾರೀಚ ಸುಭುಜರು |
ಅಡಗಿ ಬಾಂದಳಕಡರಿ ಮಾಯದಿ |
ಸಿಡಿಲು ಮಿಂಚುಗಳೊಡನೆ ಕಲ್ಪದ ಕಡೆಯ ದಿನದಂತೆ ||
ಅಡಚುತಲಿ ಗಾಢಾಂಧಕಾರವ |
ಕೆಡಹಿದರು ತನಿಮಾಂಸ ರುಧಿರದ |
ಝಡಿಮಳೆಯ ಕಂಡಂಜೆ ಋಷಿಗಳು ಕಿಡಿಗೆದರಿ ರಘುಜ ||1|| 177 ||

**ಸೌರಾಷ್ಟ್ರ - ತ್ರಿವುಡೆ**
ಮುನಿಗಳಂಜದಿರಿದಕೆ ದುರುಳರ |
ಹೆಣವ ತೋರ್ಪೆನು ನಿಮಿಷಮಾತ್ರದಿ |
ಇನಕುಲಜರಂಗವಣಿಯರಿಯಲಿ | ದನುಜರೀಗ ||1||

ಎನುತ ಧನುವಿಂಗನಿಲ ಭಾಸ್ಕರ |
ಕಣೆಗಳನ್ನಳವಡಿಸಿ ರಾಘವ |
ಕ್ಷಣದಿ ಕಿವಿವರೆಗುಗಿದು ಬಿಟ್ಟನು | ಕನಲುತಾಗ ||2||

ಕಡಿದು ಕತ್ತಲೆಯಡಗೆ ಸುರಿಮಳೆ |
ದಡಿಗರನು ಕಂಡಾ ರಘೂದ್ವಹ |
ಪಡಿಶರವನೊಡನೆಚ್ಚು ಕೆಡಹಿದ | ಪೊಡವಿಗವರ ||3|| 180 ||

**ಭೈರವಿ - ಅಷ್ಟ**
ಎದ್ದು ಕೆಂಗಿಡಿಯಿಡುತ | ಸುಬಾಹುಕ |
ರೌದ್ರದಿ ಬೊಬ್ಬಿಡುತ ||
ಇದ್ದ ಹಾರ್ವರನಪ್ರ | ಬುದ್ಧ ಬಾಲರನೆಲ್ಲ |
ಮೆದ್ದು ತೇಗುವೆನೆನುತ ||1||

ಮುಂಬರುವನ ನೋಡುತ | ಲಕ್ಷ್ಮಣ ತಡೆ |
ದಂಬುಗಳನು ಹೂಡುತ ||
ಹುಂಬ ದಾನವ ತರಿ | ದಂಬುಜಸಖಸುತ |
ನಿಂಬ ತೋರುವೆನೆನುತ ||2||

ಹೊಡೆದ ಬಾಣವ ತುಂಡಿಸಿದ | ಸುಬಾಹುಕ |
ಹಿಡಿದ ಶೂಲವ ಗರ್ಜಿಸಿ ||
ಒಡನದ ಖಂಡಿಸಿ | ಕಡುಹ ರಾಘವ ತಡೆ |
ಗಡಿದ ದೈತ್ಯನ ಸಾಹಸಿ ||3|| 183 ||

**ಕೇದಾರಗೌಳ - ಝಂಪೆ**
ಮಡಿದ ತಮ್ಮನ ಕಾಣುತ | ಮಾರೀಚ |
ಸಿಡಿಲಿನಂತಾರ್ಭಟಿಸುತ ||
ಹಿಡಿದಿವರನೊಂದೆ ತುತ್ತ | ಗೈವೆನೆಂ |
ದೊಡನೊದರಿ ಮುಂದೆ ಬರುತ ||1||

ಹುಡುಗ ಕೇಳೆಮ್ಮ ತಳ್ಳಿ | ಕಾಲ್ಗಳನು |
ತೊಡರಿ ಬೀಳಿಸುವ ಬಳ್ಳಿ ||
ಮೃಡ ಹರಿ ವಿಧಿಗಳೆಮ್ಮಲಿ | ಹಗೆಗೆಳಪೆ |
ನಡುಗುವರು ಕೇಳ್ನಿಜದಲಿ ||2||

ನಳಿನಾಕ್ಷನೆಂದ ತರಳ | ರಹುದು ರಣ |
ಕಲಿಗಳಾವಿದರ ತಿರುಳ ||
ತಿಳಿಯದೀಗೊಬ್ಬದುರುಳ | ನಮ್ಮೊಳಸು |
ಗಳೆದ ಕುಡುರೇನೊ ಮರುಳ ||3|| 186 ||

**ಭೈರವಿ - ಅಷ್ಟ**
ಕೊಲುವೆನೆನುತ ದಾನವ | ಶಕ್ತಿಯನೆತ್ತಿ |
ಗಳಕಿಡಲಾಬಾಣವ ||
ಘಳಿಲನೆ ಮುರಿದಿಕ್ಕಿ | ಪ್ರಳಯ ಪ್ರಭಂಜನ |
ಹಿಳುಕನೆಚ್ಚನು ರಾಘವ ||1|| 187 ||

**ಭಾಮಿನಿ**
ಸುತ್ತುತ್ತಾಗಸಕೆತ್ತಿ ಶರವದು |
ಸಪ್ತಸಾಗರದಾಚೆ ಬಿಸುಡಿತು |
ಮತ್ತಖಳ ಮೈಮರೆದು ಮಲಗಿದನಿತ್ತ ಕೌಶಿಕನು ||
ಸತ್ರವನು ಪೂರೈಸಿದನು ಮೇಣ್ |
ಋತ್ವಿಜರು ಸಂತುಷ್ಟರಾದರು |
ಪತ್ರದೊಡನೈತಂದು ಮಿಥಿಲಾ ಪೃಥ್ವಿಪನ ಚರರು ||1|| 188 ||

**ಮುಖಾರಿ - ಏಕ**
ಯಾರಪ್ಪೊ ಹಿಲ್ಲಿ ಹಿಸ್ವಾಮಿತ್ರ | ಯೆಂಬುವ ಆರ್ವ |
ರೊರಪ್ಪಗೈತೆ ವಂದು ಪತ್ರ ||ಪಲ್ಲ||
ಸಾರಿದ ಸಿವದಣು | ವೇರಿಸಲವಗೆ ಕೊ |
ಮಾರಿಯೆನುತ ಜಗ | ಮೂರಕೆ ದಾತ || ಯಾರಪ್ಪೊ ||ಅ.ಪ.||
ಆರಾಯ ಜಣಕ ಮಿತ್ಲಾಪಟ್ನ | ಆಯಮ್ಮ ಶೀತಾ |
ನಾರಿಗಾಯಿತು ಹಿಳೆಯಿಂದುಟ್ಟ ||
ಯಾರ್ಯಾರೋ ಬಂ | ದ್ಹೇರಿಸೆ ಬಿಲ್ಲನು |
ಓರಿದರಪ್ಪೋ | ಕಾರುತ ರೈತವ |
ನೂರಿಗೆ ಪೋದರೊ | ದಾರಿಲೆ ಸತ್ತರೊ || ಯಾರಪ್ಪೋ ||1|| 189 ||

**ಕಾಂಭೋದಿ - ಝಂಪೆ**
ಚರರು ಪತ್ರವನಿತ್ತು | ತೆರಳಿದರು ಮುನಿಪನದ |
ತೆರೆದು ವಾಚಿಸುತ ನಸುನಗುತ ||
ಸುರ ಭುಜಗ ಭೂಭುಜರು | ಸರಿಸದಾದರು ಧನುವ |
ಬರಬಹುದು ಪ್ರಬಲ ಬುಧರೆನುತ ||1||

ಬರಹವದ ಕೇಳುತ್ತ | ಕೆರಳುತಲಿ ರಘುಜಾತ |
ಅರುಹಲಿಲ್ಲೆಮಗೊಂದು ಮಾತ ||
ತರಣಿಕುಲಸಂಭೂತ | ರುರು ಬಾಹುಸಾಮರ್ಥ್ಯ |
ಮರೆಯಬಹುದೇ ಪ್ರಮತ್ತ ||2||

ಚಿಕ್ಕವರು ನೀವು ವಾ | ರ್ಧಿಕ್ಯ ತನಗೆಂದೆನುತ |
ಒಕ್ಕಣಿಸಲಿಲ್ಲ ತವ ಜನಕ ||
ತಕ್ಕ ಮಾನವನೀವು | ದಕ್ಕೆ ತಪ್ಪುವನಲ್ಲ |
ಮಿಕ್ಕ ಜ್ಞಾನಿಯು ರಾಯ ಜನಕ ||3|| 192 ||

**ಮಧುಮಾಧವಿ - ತ್ರಿವುಡೆ**
ಮುನಿಪತಿಯ ನುಡಿಗೊಪ್ಪಿ ರಾಘವ |
ಧನುವದೆಲ್ಲಿಯದೆಂತು ದೊರಕಿತು |
ಜನಕನಿಗೆ ಪೇಳೆಂದ ಪಾದದಿ |
ಪಣೆಯನಿರಿಸಿ ವಂದಿಸಿ ||1||

ಹರ ಪರಶುಧರಗಿತ್ತು ಕ್ಷಾತ್ರವ |
ನರಿಯುತವ ನ್ಯಾಸದಲಿ ಜನಕನೊ |
ಳಿರಿಸಿದನು ಸುತೆಯಳೆದಳದ ಪಣ |
ಕಿರಿಸಿರುವನು ರಾಯನು ||2||

ಸುರನರೋರಗರಿಂಗೆ ಮಣಿಯದ |
ಹರಧನುವ ನಾನೊಮ್ಮೆ ಕಾಂಬೆನು |
ಕರುಣದಿಂ ಕರೆದೊಯ್ಯುವದೆನೆ ಮುನಿ |
ತರಳರೊಡನೆ ಬೇಗನೆ ||3|| 195 ||

**ವಾರ್ಧಕ**

ಆ ತಪೋಧನರೈದಿ ಸಾತಿಶಯ ದೂರದಿಶಿ |
ಲಾ ತಪಸ್ವಿನಿ ಮಲಗಿದಾ ತಾಣಮಂ ಪೊಕ್ಕ |
ಡಾತಿರಲಿಕಲ್ಲಿ ನಿರ್ವಾತ ಸರ್ವಸ್ತಬ್ಧ ಪ್ರೇತಕಳೆಯಂ ಕಾಣುತ ||
ಕಾತರಿಸಿ ರಘುಜ ನಿಜ ಮಾತೆ ಕರೆದಂತಾಹು |
ದೇತಕೆ ಚರಾಚರವ್ರಾತ ನಿಶ್ಚಲವಿಲ್ಲಿ |
ಈ ತಪೋವನ ಪಾಳುವೋಯ್ತುದೆಂತದ ಗುರುವೆ ನೀವ್ತಿಳುಹಿರೆನೆ ಕುಶಿಕಜ ||1|| 196 ||

**ಭಾಮಿನಿ**

ನುಡಿವೆ ಬಾರೆನುತೊಂದು ಬಂಡೆಯ |
ನೆಡವಿ ಬೀಳಲು ಕಂಡು ರಾಮನು |
ಕಡುಮುಳಿದು ಪಥಕೆಡರನಿದ ಕಿತ್ತಿಡುವೆನೆಂದೆನುತ ||
ಝಡಿದು ಕಾಲಿಂದೊದೆದ ಮಾತ್ರದಿ |
ನುಡಿಯಲೇನಚ್ಚರಿಯ ತಚ್ಛಿಲೆ |
ಯಡಗಿ ಯೋಗಿನಿಯಾಗುತೆದ್ದಳು ಮಡದಿಯಾಹಲ್ಯೆ ||1|| 197 ||

**ಕಂದ ಪದ್ಯ**

ಧವಲದುಕೂಲದ ದಿವ್ಯಾಂ |
ಗವ ಕಂಡೆರಗಿದ ರಘುಪುಂಗವ ಭಕ್ತಿಯೊಳಂ ||
ತವಸಿನಿ ಪೂರ್ವಸ್ಮೃತಿಯಿಂ |
ಸ್ರವಿಸುತ ಹರ್ಷಾಶ್ರುವ ರಾಘವಗೊಂದಿಸುತಂ ||1|| 198 ||

**ಸಾವೇರಿ - ಆದಿ**

ಪಾಹಿ ಪಂಕಜನಯನ | ಜಯತು ಮುಕ್ತಿ |
ದೇಹಿ ವಾಸುಕಿಶಯನ ||ಪಲ್ಲ||
ಮಾಂ ವಿಹಗೇಂದ್ರ | ವಾಹನ ಶ್ರೀರಮಾ |
ಮೋಹನನಖಿಲ ನಿ | ರ್ವಾಹನ ಜಯಜಯ ||ಅ.ಪ.||
ಪತಿಯ ಶಾಪದಿ ನಾನು | ಕಲ್ಲಾದೆನು |
ಪತಿತಪಾವನ ನೀನು ||
ಸತಿಯ ಮೇಲ್ದಯೆಯಿಟ್ಟು | ಹುತಿಸಿದೆ ಮನಗೊಟ್ಟು |
ಗತಿಸಿತೊ ಯುಗವೆಷ್ಟು | ಚ್ಯುತ ನಿನಗೇ ಗೊತ್ತು || ಪಾಹಿ ||1||

ಹರಿಯೆ ನಿನ್ನಯ ಪಾದವ | ಸೋಕಿಸುತೆನ್ನ |
ಹರಿಸಿದೆ ಭವ ಬಂಧವ ||
ತರಳೆಯರಿಗೆ ಪತಿ ಪರದೈವವಿನಿಯನ |
ಬೆರೆದು ನಿನ್ನಲಿ ಸೇರ್ವ | ತೆರ ಗಯ್ಯೊ ಮಾಧವ || ಪಾಹಿ ||2||

ಎನುತಂಘ್ರಿಗೆ್ಗಣೆಯೊತ್ತಿದ | ಅಹಲ್ಯೆಯ |
ಚಿನುಮಯಾತ್ಮಕನೆತ್ತಿದ ||
ಘನಪತಿವ್ರತೆನಿನ್ನ | ನೆನೆವರ ದುರಿತವು |
ಹನನವಾಗಲಿಯೆಂದಾ | ವನಜಾಕ್ಷ ಹರಸಿದ || ಎನುತಂಘ್ರಿ ||3|| 201 ||

**ಭಾಮಿನಿ**

ಮನದಿ ತಿಳಿದೈತಂದು ಗೌತಮ |
ವನಜನಯನನನಪ್ಪಿ ತನ್ನಯ |
ವನಿತೆಯಳ ಕಣ್ಣೊರೆಸಿ ಕರವಿಡಿದನಿಬರೊಡವೆರಸಿ ||
ಮುನಿಗೃಹಕ್ಕೈತಂದು ಪೂಜಿಸಿ |
ಚಿನುಮಯಂಗಾರತಿಯ ಬೆಳಗಿದ |
ರೆನಿತಹಲ್ಯೋದ್ಧಾರವಾಯ್ತೆಂದನು ಮಹೇಶ್ವರನು ||1|| 202 ||

**ವಾರ್ಧಕ**

ತೆರಳಿ ಮಿಥಿಲೆಗೆ ಮುಂದೆ ಮುರಿದು ಧನುವಂ ರಾಮ |
ವರಿಸಿ ಜಾನಕಿಯ ಮಿಕ್ಕಿರುವ ಮೂತರಳೆಯರ |
ಭರತ ಲಕ್ಷ್ಮಣ ಶತ್ರುಹರಿಂಗೆ ಪರಿಣಯವ ವಿರಚಿಸುತ ಪಿತನ ಮುಖದಿ ||
ಬರುತಿರಲ್ ಸಾಕೇತ ಪುರಕೆ ಮಾರ್ಗದಿ ತಡೆದ |
ಪರಶುಧಾರಿಯ ಗರ್ವ ಹರಿಸುತರಮನೆಗೈದಿ |
ಹರುಷದಿಂದಿರ್ದ ಶ್ರೀಹರಿಯೊಲುಮೆ ಹದಿಮೂರಕರಳಿತೀ ಕೃತಿಕುಸುಮವು ||1|| 203 ||

**ಭಾಮಿನಿ**

ಸಾರ್ವ ಶಕ ಸಾವಿರದ ವಂಭೈ |
ನೂರರಾಶ್ವಿಜ ಶುಕ್ಲಪಕ್ಷದ|
ಚಾರು ವಿಜಯಾದಶಮಿಗಿದ ಸಂಪೂರ್ಣಗೊಳಿಸುತಲಿ ||
ಭೂರಿ ಸಜ್ಜನ ನಿಚಯಪದಪಂ |
ಕೇರುಹಕ್ಕರ್ಪಣೆಯಗೈದೆನು |
ದಾರಮತಿಯಲಿ ಮೆರೆವರಿಷ್ಟವ ಪೂರಯಿಪ ಹರಿಯು ||1|| 204 ||

**ಮಂಗಲಪದ್ಯ**
**ಧವಳಾರ - ಏಕ**

ಮಂಗಲಂ | ಜಯ | ಮಂಗಲಂ |
ಮಂಗಲಂ ದಶರಥ ರಾಮನಿಗೆ |
ಮಂಗಲ ಜಾನಕಿಪ್ರೇಮನಿಗೆ ||
ಮಂಗಲ ಮನುಜೋದ್ಧಾಮಗೆ ಜಯಜಯ |
ಮಂಗಲ ಮೇಘಶ್ಯಾಮನಿಗೆ || ಮಂಗಲಂ ||1|| 205 ||

*****ಶುಭಂ*****

# ಕೃತಜ್ಞತೆಗಳು

**ಅಂತರಜಾಲ ಪ್ರಕಾಶನ ಪ್ರಾಯೋಜಕರು:** ಕರ್ನಾಟಕ ಯಕ್ಷಗಾನ ಅಕಾಡೆಮಿ, ಕರ್ನಾಟಕ ಸರ್ಕಾರ

**ಮೂಲ ಪ್ರಕಾಶಕರು:** ದಿ. ಬೆಳಸಲಿಗೆ ಗಣಪತಿ ಹೆಗಡೆ ಕೃತಿ ಪ್ರಕಾಶನ, ಸಿದ್ದಾಪುರ, ಬೆಳಸಲಿಗೆ ಕೃತಿ ಸಂಪುಟ - ೪

**ಪ್ರಸಂಗ ಪ್ರತಿ ಆಧಾರ:** ದಿ. ಬೆಳಸಲಿಗೆ ಗಣಪತಿ ಹೆಗಡೆ ಕೃತಿ ಪ್ರಕಾಶನ, ಸಿದ್ದಾಪುರ, ಬೆಳಸಲಿಗೆ ಕೃತಿ ಸಂಪುಟ - ೪

**ಪ್ರಸಂಗ ಪ್ರತಿ ಕೊಟ್ಟವರು:** ಲ. ನಾ. ಭಟ್

**ಪ್ರಸಂಗ ಪ್ರತಿ ಒದಗಣೆಗೆ ಸಹಕಾರ:** ಲ. ನಾ. ಭಟ್, ನಟರಾಜ ಉಪಾಧ್ಯ

**ಅಂತರಜಾಲ ಪ್ರತಿ ಬರವಣಿಗೆ:** ಮನೋಜ್ ಭಟ್

**ಅಂತರಜಾಲ ಪ್ರತಿ ವಿನ್ಯಾಸ:** ಅಶ್ವಿನಿ ಹೊದಲ, ಅಜಿತ್ ಕಾರಂತ್

**ಅಂತರಜಾಲ ಪ್ರತಿ ತಿದ್ದುಪಡಿ :** ಶ್ರೀಧರ ಡಿ.ಎಸ್., ಗಿಂಡೀಮನೆ ಮೃತ್ಯುಂಜಯ

**ಅಂತರಜಾಲ ಪ್ರತಿ ಉತ್ಪಾದನೆ ಮತ್ತು ಪ್ರಕಾಶನ:** ರವಿ ಮಡೋಡಿ, ನಟರಾಜ ಉಪಾಧ್ಯ, ಅಶ್ವಿನಿ ಹೊದಲ